ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2020

ಕೃತಜ್ಞತಾ ವಿಶೇಷಾಂಕ

ಬಿಡಿ ಪ್ರತಿ: ರೂ.10.00

ಪ್ರಿಯ ಓದುಗರೇ,

ಕಳೆದ ತಿಂಗಳಿನಂತೆ ಮೇ ತಿಂಗಳ ಈ ಅಪರಂಜಿ ಸಂಚಿಕೆಯನ್ನೂ ಸಹಾ ಇ-ಮಾಧ್ಯಮದ ಮೂಲಕವೇ ಕಳುಹಿಸುವ ಅನಿವಾರ್ಯತೆ ನಮ್ಮ ಮುಂದಿದೆ. ಕರೋನಾ ಮಹಾಮಾರಿಯ ಪ್ರಯುಕ್ತ ಮುದ್ರಣ ಮತ್ತು ವಿತರಣೆಯ ಕೆಲಸ ಸರಾಗವಾಗಿ ಆಗುವ ಸಾಧ್ಯತೆ ಕಡಿಮೆ ಇರುವುದರಿಂದ ನಾವು ಈ ಹೆಜ್ಜೆಯನ್ನು ತೆಗೆದುಕೊಂಡಿದ್ದೇವೆ. ಪರಿಸ್ಥಿತಿ ಹದಕ್ಕೆ ಬಂದ ತಕ್ಷಣ ಏಪ್ರಿಲ್ ಹಾಗೂ ಮೇ ಸಂಚಿಕೆಗಳನ್ನು ಮುದ್ರಿಸಿ ಮುಂದಿನ ಸಂಚಿಕೆಯೊಂದಿಗೆ ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

ಈ ತಿಂಗಳ ಸಂಚಿಕೆ, ಕರೋನಾ ವಿರುದ್ಧ ಸಂಗ್ರಾಮದ ಮುಂಚೂಣಿಯಲ್ಲಿರುವ ಎಲ್ಲ ವೈದ್ಯರು, ದಾದಿಯರು, ಪೋಲೀಸರು ಹಾಗೂ ಪೌರಕಾರ್ಮಿಕರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸುವ ಸಲುವಾಗಿ ' ಕೃತಜ್ಞತಾ ವಿಶೇಷಾಂಕ' ಎಂದು ಹೆಸರಿಸಿ, ಆ ಭಾವನೆಗೆ ಸರಿಹೊಂದುವ ಲೇಖನಗಳನ್ನು ಆರಿಸಿ ನಿಮ್ಮ ಮುಂದೆ ಇಟ್ಟಿದ್ದೇವೆ.

ಬಹು ಬೇಗ ಪರಿಸ್ಥಿತಿ ತಿಳಿಯಾಗಲೆಂಬುದೇ ಅಪರಂಜಿಯ ಪ್ರಾರ್ಥನೆ.

ತಮ್ಮ ವಿಶ್ವಾಸಿ,

ಶಿವಕುಮಾರ್

ಸಂಪಾದಕ

ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 37
ಸಂಚಿಕೆ – 08
ಮೇ – 2020

ಸಂಪಾದಕ ಮಂಡಳಿ

ಸಂಪಾದಕರು
ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು
ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ
ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

ಈ ಸಂಚಿಕೆಯಲ್ಲಿ.....

ಅಪರಂಜಿ ಕಿಡಿ	ಪ್ರಕಾಶ್	4
ನಮ್ಮ ನಮ್ಮಲ್ಲಿ	ಶಿವಕುಮಾರ್	5
ಕೋವಿದ ವೀರರು	ನಾ.ಶ್ರೀ.ಮೋ.	7
ಕರೋನಾ ಮರಳಿ ಕಲಿಸಿದ ಪಾಠ	ಡಾ.ಡಿ.ವಿ. ಗುರುಪ್ರಸಾದ್	8
ಶಂಖದಿಂದ ಬಂದದ್ದು	ಎಚ್.ಗೋಪಾಲಕೃಷ್ಣ	11
ಅವಿಶ್ರಾಂತ ಅಜ್ಞಾತ ಯೋಧರು	ಜಯಕುಮಾರ್ ಮರಿಯಪ್ಪ	17
ತುಂತುರು	ದಂನಳ	20
... ಅಂದು ಏಷ್ಯನ್ ಫ್ಲೂ	ಸಿ.ಆರ್. ಸತ್ಯ	21
ಕಪಿನೀಪತಿಯೂ ಕೊರೋನಾ ವೈರಸ್	ಬೇಲೂರು ರಾಮಮೂರ್ತಿ	23
ಕೊರೋನಾ, ಕೊರೋನಾ	ಸಹನಾ ಪ್ರಸಾದ್	28
ಲಾಲ್ ಬಾಗ್‌ನ ಕೊರಗು	ಆರ್. ಪ್ರಕಾಶ್	30
ಕೊರೋನಾಗೆ ಇದು ಸರೀನಾ?	ಡಾ. ಶರಣ ಬಸವೇಶ್ವರ ಅಂಗಡಿ	32
ಏನೇ ಬರಲಿ, ಶಿಸ್ತೊಂದಿರಲಿ	ಸಿ. ಆರ್. ಸತ್ಯ	34
ಕೊರೊನಾ ಕಸರತ್ತು	ಇ.ಆರ್. ರಾಮಚಂದ್ರನ್	36
ನುಡಿದಂತೆ ನಡೆದರು	ಉಲ್ಲಾಸ ರಾಯಸಂ	38
ಕೊರೋನಾ ಬಿಟ್ಟು...	ಪ್ರಕಾಶ್ ಶೆಟ್ಟಿ	40

ವ್ಯಂಗ್ಯಚಿತ್ರ
ಮುಖಪುಟ : ನಾಗನಾಥ್

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್

ಅಪರಂಜಿ ಕಿಡಿ

•ಪ್ರಕಾಶ್

ಪ್ಲವನಾಮ ಸಂವತ್ಸರದಲ್ಲಾದರೂ ಜಗತ್ತು ಕರೋನಾ ಭೀತಿಯಿಂದ ಮುಕ್ತವಾಗಲಿ ಎಂದು ಅಪರಂಜಿ ಪ್ರಾರ್ಥಿಸುತ್ತಾಳೆ.

***

ಮಲ್ಲೇಶ್ವರದ ರಸ್ತೆಗಳಲ್ಲಿ ನವಿಲುಗಳ ನರ್ತನ, ಮನೆಗಳಲ್ಲಿ ಗುಬ್ಬಚ್ಚಿಗಳ ಕಲರವಗಳಿಂದ ಅಪರಂಜಿ ಸಂತಸಪಟ್ಟಳಂತೆ!

***

ಕರೋನಾ ಕಾರಣದಿಂದ ವಾತಾವರಣ ಮಾಲಿನ್ಯವು ದಿಢೀರನೆ ತಗ್ಗಿದ್ದನ್ನು ಕಂಡು ಅಪರಂಜಿ ನಗಬೇಕೋ ಬೇಡವೋ ಎಂಬ ದ್ವಂದ್ವಕ್ಕೆ ಸಿಲುಕಿದಳಂತೆ!

***

ಜಗತ್ತಿನಾದ್ಯಂತ ಜೀವದ ಹಂಗು ತೊರೆದು ರೋಗಿಗಳ ಚಿಕಿತ್ಸೆ ಮಾಡುತ್ತಿರುವ ವೈದ್ಯರು, ದಾದಿಗಳು ಮತ್ತಿತರ ಸಿಬ್ಬಂದಿಗಳಿಗೆ ಅಪರಂಜಿಯ ಹೃತ್ಪೂರ್ವಕ ವಂದನೆಗಳು.

***

ಸೋಷಿಯಲ್ ಡಿಸ್ಟೆನ್ಸಿಂಗ್ ಅನ್ನೋದನ್ನ ನಾವು ಎಷ್ಟೋ ದಶಕಗಳಿಂದಲೇ ಆಚರಿಸಿಕೊಂಡು ಬರುತ್ತಿದ್ದೇವಲ್ಲ ಎಂದು ನಮ್ಮ ನಾಡಿನ ರಾಜಕಾರಣಿಗಳು ನಕ್ಕರಂತೆ !!

****

"ಲಾಕ್ಡೌನ್ ಪರಿಣಾಮವಾಗಿ ಸಣ್ಣಪುಟ್ಟ ಸಮಸ್ಯೆಗಳಿಗೆ ರೋಗಿಗಳು ಆಸ್ಪತ್ರೆಗೆ ಧಾವಿಸುವುದು ನಿಂತುಹೋಗಿದೆ"   ಸುದ್ದಿ.
ಇದರ ಬಗ್ಗೆ ಸಂಶೋಧನೆ ನಡೆಯಬೇಕಾದ್ದು ಅಗತ್ಯ !!

***

ಅಹೋರಾತ್ರಿ ನೀರವ ನಿಶ್ಶಬ್ದದಿಂದ ನಿದ್ದೇನೇ ಬರುತ್ತಿಲ್ಲ ಎಂದು ಬಳ್ಳಾರಿ ರಸ್ತೆಯಲ್ಲಿ ವಾಸಿಸುವ ಓದುಗರೊಬ್ಬರು ಪೇಚಾಡುತ್ತಿದ್ದಾರೆ. !!

ನಮ್ಮ ನಿಮ್ಮಲ್ಲಿ

• ಶಿವಕುಮಾರ್

ಜಗತ್ತಿನ ಸಮಾಜಗಳ ಮತ್ತು ಆರ್ಥಿಕ ವ್ಯವಸ್ಥೆಗಳ ಬಗ್ಗೆ ನಮ್ಮ ತಿಳುವಳಿಕೆಗಳನ್ನೆಲ್ಲಾ ಬುಡಮೇಲು ಮಾಡುವ ಕಠೋರ ಸತ್ಯವನ್ನು ಕರೋನಾ ನಮ್ಮ ಮುಂದಿಟ್ಟಿದೆ. ಇಷ್ಟು ದಿನಗಳೂ ಪ್ರಪಾತವೊಂದರ ಅಂಚಿನಲ್ಲಿ , ಅದಕ್ಕೆ ಬೆನ್ನುಮಾಡಿ ನಿಂತು ನಮ್ಮ ಗಗನಚುಂಬಿಗಳಲ್ಲಿನ ಜಾಗತಿಕ ಕಾರ್ಪೊರೇಟ್‌ಗಳು ಜೆಟ್ ವಿಮಾನಗಳ ಮೂಲಕ ಜಗತ್ತಿನಾದ್ಯಂತ ಹೆಣೆದಿದ್ದ ' ಆಧುನಿಕ ಸಮಾಜ', ಈಗ ದಕ್ಷಿಣಾಮೂರ್ತಿ ಸ್ತೋತ್ರದಲ್ಲಿ ಹೇಳುವಂತೆ, 'ದರ್ಪಣ ದೃಶ್ಯಮಾನ ನಗರಿ' ಯಂತೆ ಕಾಣಿಸುತ್ತಿದೆ. ಕೇವಲ ಕೆಲವೇ ತಿಂಗಳುಗಳ ಕರೋನಾ ಆಟಾಟೋಪದಲ್ಲಿ , ವಿಮಾನ ಸಾರಿಗೆಯೂ ಸೇರಿದಂತೆ ಕೈಗಾರಿಕೆಗಳು ಒಂದಾದಮೇಲೊಂದರಂತೆ ನೆಲ ಕಚ್ಚುತ್ತಿವೆ. ಜಾಗತಿಕ ಮಾರುಕಟ್ಟೆಗಳು ಹಿಂದೆಂದೂ ಕಾಣದಿದ್ದ ಆರ್ಥಿಕ ಹಿಂಜರಿತವನ್ನು ಎದಿರುನೋಡುವಂತಾಗಿದೆ.. ಇತ್ತೀಚೆಗಷ್ಟೇ ನಾವು ಬಿಟ್ಟುಬಂದ ಆ ಜಗತ್ತನ್ನು ಮುಂದಿನ ದಿನಗಳಲ್ಲಿ ಮತ್ತೆ ಜೀವಂತವಾಗಿಸುವ ಮಾತೆಲ್ಲಾ ಹುರುಳಿಲ್ಲದ ಆಶಾವಾದದಂತೆ ಕಾಣಿಸಿದರೆ ಆಶ್ಚರ್ಯವಿಲ್ಲ.

ಸಾವಿರಾರು ವರ್ಷಗಳಿಂದ ಹೆಸರಿಲ್ಲದ ಪರೋಪಜೀವಿಯೊಂದು ದಕ್ಷಿಣ ಚೀನಾದಲ್ಲಿನ ಹಾರ್ಸ್‌ಷೂ ಬಾವಲಿಗಳ ಆಶ್ರಯ ಪಡೆದು ಸುಖವಾಗಿದ್ದವು. ಸುದೀರ್ಘ ಕಾಲದ ಸ್ನೇಹದ ದೆಸೆಯಿಂದ ಈ ಪರೋಪಜೀವಿ ಬಾವಲಿಗಳ ಆರೋಗ್ಯವನ್ನು ಕೆಡಿಸದೇ ಜೀವಿಸಿತ್ತು. ಒಂದು ದಿನ ಈ ಕರೋನಾ ವೈರಸ್ಸಿನ ಜಾತಿಯ ಜೀವಿಯೊಂದು ಅದೇ ಪರಿಸರದಲ್ಲಿ ಜೀವಿಸಿದ್ದ ಪಾಂಗೊಲಿನ್ ಎಂಬ ಕಾಡು ಪ್ರಾಣಿಯ ಶ್ವಾಸಕೋಶವನ್ನು ಪ್ರವೇಶಿಸಿ ಅಲ್ಲಿ ನೆಲೆಸಿತು.ಈ ಪಾಂಗೊಲಿನ್ ಚೀನೀಯರಿಗೆ ಬಹು ಪ್ರಿಯವಾದ ಖಾದ್ಯ. ಹಾಗಾಗಿ ಈ ವೈರಸ್ಸಿನ ಸೋಂಕು ತಗುಲಿದ್ದ ಪಾಂಗೊಲಿನ್ ಅನ್ನು ಒಬ್ಬ ಚೀನೀ ನತದೃಷ್ಟ ವುಹಾನ್ ಮಾರುಕಟ್ಟೆಗೆ ತರುತ್ತಿದ್ದಾಗ ಕರೋನಾಗೆ ಆಶ್ರಯ ಪಡೆಯಲು ಒಂದು ಹೊಸ ಜೀವಿ ಸಿಗುವ ಅವಕಾಶ ತೆರಪಾಯಿತು. ಪಾಂಗೊಲಿನ್ ಹೊತ್ತು ಬರುತ್ತಿದ್ದಾಗ ಈ ವ್ಯಾಪಾರಿ ಅರಿಯದೇ ಕಣ್ಣು ಉಜ್ಜಿಕೊಂಡನೋ, ಅಥವಾ ಯಾವುದೋ ಆತಂಕದಿಂದ ಉಗುರು ಕಚ್ಚಿಕೊಂಡನೋ ತಿಳಿಯದು. ಆ ಒಂದು ಕ್ರಿಯೆಯಿಂದ ಒಂದು ಅತಿಸೂಕ್ಷ್ಮ ಪರೋಪಜೀವಿ ಒಂದು ಮಾನವ ಮುಖವನ್ನು ತಲುಪಿತು. ಆ ಘಟನೆಯ ಫಲಶ್ರುತಿ ವಿಶ್ವಾದ್ಯಂತ ಹರಡಿರುವ ಈ ಮಹಾಮಾರಿ.

ಯಾರೋ ಒಬ್ಬ ಪತ್ರಕರ್ತ ಕ್ಯಾಪ್ಟನ್ ಗೋಪಿನಾಥ್ ಅವರನ್ನು ಕುರಿತು,'

ವಿಮಾನ ಸಾರಿಗೆ ಉದ್ಯಮ ಈ ಕರೋನಾ ಪಿಡುಗನ್ನು ಇದುರಿಸಿ ಮತ್ತೆ ಪುನರುಜ್ಜೀವನಗೊಳ್ಳಲು ಸಾಧ್ಯವೇ ?' ಅಂತ ಪ್ರಶ್ನಿಸಿದನಂತೆ. ಈ ಪ್ರಶ್ನೆ ಅವರನ್ನು ಚಿಂತೆಗೀಡುಮಾಡಿತು. ಈ ಕುರಿತು ಅವರು ಹೀಗೆನ್ನುತ್ತಾರೆ. 'ಪುನರುಜ್ಜೀವನದ ಮಾತು ಬಂದಾಗ ವಿಮಾನ ಸಾರಿಗೆ ಉದ್ಯಮವನ್ನು ಪ್ರತ್ಯೇಕವಾಗಿ ಗಮನಿಸುವುದಕ್ಕಾಗುತ್ತದೆಯೇ. ದೇಶದ ಕೈಗಾರಿಕಾ ಚಟುವಟಿಕೆಗಳಿಗೆ ಬೆನ್ನೆಲುಬಾಗಿ ನಿಂತಿರುವ ಲಕ್ಷಾಂತರ ಕಾರ್ಮಿಕರು, ರೈತರು ತಮ್ಮ ಜೀವನಕ್ಕೆ ಬೇಕಾದ ಕನಿಷ್ಠ ವರಮಾನವಿಲ್ಲದೇ ಕಂಗಾಲಾಗಿರುವಾಗ, ಕೈಗಾರಿಕಾ ಪಿರಿಮಿಡ್ಡಿನ ತುದಿಯಲ್ಲಿ ನಿಂತಿರುವ ಆಟೋಮೊಬೈಲ್ ಮತ್ತು ವಿಮಾನ ಕೈಗಾರಿಕೆಗಳ ಭವಿಷ್ಯದ ಬಗ್ಗೆ ಏನು ಹೇಳಲು ಸಾಧ್ಯ? ನಮ್ಮ ಮುಂದೆ ಬಂದು ನಿಂತಿರುವ ಈ ಮಹಾಮಾರಿಯ ಪ್ರಸರಣಾ ಶಕ್ತಿ ಮತ್ತು ಅದನ್ನು ನಿರೋಧಿಸಲು ಮಾಡುತ್ತಿರುವ ಅಳಿಲು ಪ್ರಯತ್ನ ಇವೆಲ್ಲದರ ಬಗ್ಗೆ ಖಚಿತವಾದ ವೈಜ್ಞಾನಿಕ ಮಾಹಿತಿ ದೊರಕುವವರೆಗೂ ಆ ಪತ್ರಕರ್ತನ ಪ್ರಶ್ನೆಗೆ ಉತ್ತರ ನೀಡುವ ಯತ್ನ ಹುಚ್ಚುತನವಾದೀತು'

ಕರೋನಾ ರೋಗಾಣು ತನ್ನ ಪ್ರಸರಣಾ ಕಾರ್ಯಕ್ಕೆ ಮಾನವ ಸಹಜ ಸಂಘಜೀವಿತ್ವದ ಸೇತುವೆಯನ್ನು ಬಳಸಿಕೊಂಡು ವಿಜೃಂಭಿಸುತ್ತಿದೆ. ಕಳೆದ ಹಲವು ಮಿಲಿಯನ್ ವರ್ಷಗಳಲ್ಲಿ ಮನುಕುಲ ಇದಿರಿಸುವ ಸವಾಲುಗಳನ್ನು ಗಮನಿಸಿದರೆ ಈ ಪಿಡುಗನ್ನೂ ಮಾನವ ಯಶಸ್ವಿಯಾಗಿ ಇದುರಿಸುವುದರಲ್ಲಿ ಯಾವ ಸಂಶಯವೂ ಇಲ್ಲ. ಈ ಹೋರಾಟದಲ್ಲಿ ಮನುಷ್ಯ ತನ್ನ ಮಾನಸಿಕ ಸ್ಥೈರ್ಯವನ್ನು ಕಳೆದುಕೊಳ್ಳದೇ ಆತಂಕರಹಿತ ಮನಸ್ಸಿನಿಂದ ದಿನನಿತ್ಯದ ಕಾರ್ಯಗಳನ್ನು ಮಾಡುವುದು ಅತಿ ಮುಖ್ಯವಾಗುತ್ತದೆ. ಈ ನಿಟ್ಟಿನಲ್ಲಿ ಭಾರತೀಯರಾದ ನಮಗೆ ಒಂದು ದೈವದತ್ತವಾದ ಅನುಕೂಲವಿದೆ. ಭಾರತ ಒಂದು ಪುಣ್ಯಭೂಮಿ. ವೇದ ಉಪನಿಷತ್ತುಗಳ ನಾಡು. ಧೀಃ ಶಕ್ತಿ ಇಲ್ಲಿನ ಮೂಲಮಂತ್ರ. ಸಾತ್ವಿಕ ಜೀವನ ಶೈಲಿ ನಮ್ಮ ತಾತ ಮುತ್ತಾತಂದಿರ ಬಳುವಳಿ. ಇದನ್ನೆಲ್ಲಾ ಮನನ ಮಾಡಿ ಒಂದು ಹಿತ ಮಿತವಾದ ಜೀವನ ಶೈಲಿಯನ್ನು ರೂಪಿಸಿಕೊಂಡರೆ ನಾವೆಲ್ಲಾ ಭವಿಷ್ಯವನ್ನು ಧೈರ್ಯದಿಂದ ಎದುರಿಸಬಹುದು. ಈ ಪಿಡುಗಿನಲ್ಲಿ ನಮ್ಮನ್ನಗಲಿದ ಎಲ್ಲರಿಗೂ ಅಪರಂಜಿ ಬಹು ನಮ್ರ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾಳೆ. ರೋಗಿಗಳೆಲ್ಲ ಬಹು ಬೇಗ ಗುಣಮುಖರಾಗಲೆಂದು ಆಶಿಸುತ್ತಾಳೆ. ಲಾಕ್ ಡೌನ್ ನಲ್ಲಿ ಗೃಹಬಂಧನದಲ್ಲಿರುವ ನಿಮಗೆಲ್ಲರಿಗೂ ಇಗೋ ಸಾಮಾಜಿಕ ಅಂತರವಿಲ್ಲದೇ ನಿಮ್ಮ ಬಳಿ ಬಂದು ಸಾಂತ್ವನ ನೀಡುತ್ತಿದ್ದಾಳೆ.

ಸರ್ವೇ ಜನಾಃ ಸುಖಿನೋ ಭವಂತು. ■

ಕೋವಿದ ವೀರರು

● ನಾ.ಶ್ರೀ.ಮೋ.

ನಮ್ಮ ನಮನವಿರಲಿ ನಮ್ಮ ಕಾಯ್ವ ರಕ್ಷಕಗರಿಗೆ
ಸ್ವಂತವನ್ನು ಬದಿಗಿರಿಸಿದ ದಾದಿ ವೈದ್ಯಮಂದಿಗೆ
ನಮ್ಮ ಕಸವ ತೆಗೆದು ಸ್ವಚ್ಛಗೊಳಿಪ ಸ್ವಚ್ಛತ ಯೋಧಗೆ
ಮನೆಯಲಿರಿ ವೈರಾಣು ಹರಡದಿರಿ ಇವರ ಬಲವ ಕುಂದದೆ।।

ಆರಕ್ಷಕರು ರಕ್ಷೆತೂರಿ ಬಂದಿಹರು ಬೀದಿ ಬೀದಿಗೆ
ನಿಮ್ಮನಷ್ಟೆ ಶಿಕ್ಷಿಸ ಬೇಕೆ ಅವರು? ನೀವು ಅಶಿಕ್ಷಿತರೆ?
ಸಹಕರಿಸಿ ಅವರೊಂದಿಗೆ, ಅದು ನಮ್ಮ ರಕ್ಷೆಗಾಗಿಯೆ
ಅವರಿಗೂ ಮನೆಮಂದಿಯುಂಟು ಅವರು ನಿಮ್ಮಂತೆಯೆ।।

ಐದು ವರುಷ ಸತತ ಓದಿ ವೈದ್ಯರಿವರು ಆದರು
ಬಹಳ ತಾಳ್ಮೆ ಸಂಯಮತಳೆದವಳು ದಾದಿಯಾದಳು
ನಮ್ಮ ನಿಮ್ಮ ಸೇವೆಗೆಂದು ಪ್ರಾಣ ಪಣವನಿಟ್ಟರು
ಅವರಿಗೂ ಮನೆಮಂದಿಯುಂಟು ನಿಮ್ಮಲ್ಲಿ ಅವರೊಬ್ಬರು।।

ರಸ್ತೆಗಳನು ಗುಡಿಸುತ್ತಾ ತಿಪ್ಪೆಗಳ ತೆಗೆಯುತ್ತಾ
ನೀವು ಮಾಡಿದಾ ಕಲುಶ, ಅವರ ಕೈಗೆ ತುಂಬುತ್ತಾ
ಅವರಿಗೆತ್ತಲು ಹೇಳಿ ಮೆತ್ತಗೆತ್ತಲೊ ನೋಡುತ್ತಾ ತಿಳಿ
ಅವರಿಗೂ ಮನೆಮಂದಿಯುಂಟು ನಿಮ್ಮಲ್ಲಿ ಅವರೊಬ್ಬರು।।

ನಮ್ಮ ನಮನವಿರಲಿ ನಮ್ಮ ಕಾಯ್ವ ರಕ್ಷಕಗರಿಗೆ
ಸ್ವಂತವನ್ನು ಬದಿಗಿರಿಸಿದ ದಾದಿ ವೈದ್ಯಮಂದಿಗೆ
ನಮ್ಮ ಕಸವ ತೆಗೆದು ಸ್ವಚ್ಛಗೊಳಿಪ ಸ್ವಚ್ಛತ ಯೋಧಗೆ
ಮನೆಯಲಿರಿ ಹರಡದಿರಿ ಇವರ ಬಲವ ಕುಂದದೆ

ಕರೋನಾ ಮರಳಿ ಕಲಿಸಿದ ಕೆಲವು ಪಾಠಗಳು

• ಡಾ.ಡಿ.ವಿ.ಗುರುಪ್ರಸಾದ್

ಎರಡು ಗಂಟೆಗಳಿಗೊಮ್ಮೆ ಕೈಗಳನ್ನು ಸಾಬೂನಿನಿಂದ ತೊಳೆಯುತ್ತಿರಿ, ಕೋವಿಡ್ ಮಹಾಮಾರಿಯನ್ನು ದೂರವಿಡಿ ಎನ್ನುವ ಸಂದೇಶಗಳನ್ನು ನಾವು ಪದೇ ಪದೇ ಕೇಳುವಾಗ ನನಗೆ ನನ್ನ ಬಾಲ್ಯದ ದಿನಗಳ ನೆನಪಾಯಿತು. ವೈಯಕ್ತಿಕ ಶುಚಿತ್ವವನ್ನು ಕಾಪಾಡಿಕೊಳ್ಳುವುದು ಅತಿ ಮುಖ್ಯ ಎನ್ನುವ ಪಾಠವನ್ನು ನಮ್ಮ ಹಿರಿಯರು ನಮಗೆ ಚಿಕ್ಕಂದಿನಿಂದಲೇ ಕಲಿಸಿದ್ದರು. ಹೊರಗೆ ಹೋಗಿ ಮನೆಗೆ ವಾಪಸಾದಾಗ ಮನೆಯ ಬಾಗಿಲಿನ ಹೊರಗಡೆಯೇ ಪಾದರಕ್ಷೆಗಳನ್ನು ಬಿಟ್ಟು, ಕೈ ಕಾಲು ಮುಖ ತೊಳೆದ ನಂತರವೇ ಮನೆಯೊಳಗೆ ಬರಬೇಕಾಗಿತ್ತು. ಇದರಿಂದ ಹೊರಗಿನ ಕೀಟಾಣುಗಳು ಮನೆಯೊಳಗೆ ಬರದಂತೆ ರಕ್ಷಣೆ ಸಿಗುತ್ತಿತ್ತು. ಕೆಲವು ಹಿರಿಯರು ಹೊರಗಡೆ ಹೋಗಲು ಹಾಕಿಕೊಂಡ ಬಟ್ಟೆಗಳನ್ನು ಮನೆಯೊಳಗೆ ಧರಿಸುತ್ತಿರಲಿಲ್ಲ. ಶೌಚಾಲಯಕ್ಕೆ ಹೋದರೆ ಕಾಲು, ಕೈಗಳನ್ನು ತೊಳೆಯದೇ ಮನೆಯೊಳಗೆ ಬರುವಂತೆಯೇ ಇರಲಿಲ್ಲ. ಊಟ ತಿಂಡಿ ಮಾಡುವ ಮುನ್ನ ಕೈ, ಕಾಲು, ಹಾಗೂ ಮುಖವನ್ನು ತೊಳೆದೇ ತಟ್ಟೆಯ ಮುಂದೆ ಕೂಡಬೇಕಾಗಿತ್ತು. ಯಾವ ವಸ್ತುವನ್ನೂ ತಿನ್ನುವ ಮೊದಲು ಅದನ್ನು ತೊಳೆದೇ ತಿನ್ನಬೇಕಾಗಿತ್ತು. ಆಗಿನ ಕಾಲದಲ್ಲಿ ಡೈನಿಂಗ್ ಟೇಬಲ್ ಇರದಿದ್ದ ಕಾರಣ ನೆಲದ ಮೇಲೆಯೇ ಪದ್ಮಾಸನದಲ್ಲಿ ಕುಳಿತು ಊಟವನ್ನು ಮಾಡಬೇಕಾಗಿತ್ತು. ಊಟಕ್ಕೆ ಮೊದಲು ತಟ್ಟೆಯನ್ನು ಶುಚಿಯಾಗಿ ತೊಳೆಯಬೇಕಾಗಿತ್ತು, ಊಟವಾದ ನಂತರ ಮನೆಯ ಹೆಣ್ಣುಮಕ್ಕಳು ಗೋಮಯ (ಹಸುವಿನ ಸಗಣಿ ನೀರು) ಹಾಕಿ ನೆಲವನ್ನು ಶುಚಿ ಮಾಡುತ್ತಿದ್ದರು. ಜ್ವರ ಬಂದ ದಿನದ ಹೊರತಾಗಿ ಪ್ರತಿದಿನವೂ ಸ್ನಾನವನ್ನು ಮಾಡಲೇ ಬೇಕಾಗಿತ್ತು.

ಇತರರನ್ನು ಭೇಟಿಯಾದಾಗ ಇಂದಿನಂತೆ ಅಪ್ಪಿಕೊಳ್ಳುವುದು, ಹಸ್ತಲಾಘವ ಕೊಡುವುದು ಮುಂತಾದವನ್ನು ನಾವು ಮಾಡುತ್ತಲೇ ಇರಲಿಲ್ಲ. ಎಲ್ಲರಿಗೂ ಕೈಜೋಡಿಸಿ ನಮಸ್ಕರಿಸಿಯೇ ವಂದಿಸುತ್ತಿದ್ದೆವು. ಹಿರಿಯರನ್ನು ಕಂಡರೆ ಮೈಬಗ್ಗಿ ನಮಸ್ಕರಿಸುತ್ತಿದ್ದೆವು. ತಗ್ಗಿ ಬಗ್ಗಿ ನಡೆಯುವುದರಿಂದ ಅಹಂಭಾವ ಹೋಗುತ್ತದೆ ಎಂದು ನಮ್ಮ ಅಜ್ಜಿ ಹೇಳುತ್ತಿದ್ದರು. (ಪ್ರತಿಯೊಬ್ಬರಿಗೂ ಮೈ ಬಗ್ಗಿಸಿ ನಮಿಸುವುದರಿಂದಲೇ ಜಪಾನೀಯರು ಹೆಚ್ಚು ಕಾಲ ಬದುಕುತ್ತಾರೆ ಎನ್ನುವುದು ನನ್ನ ತರ್ಕ)

ಮನೆಗಳಲ್ಲಿ ನಮ್ಮನಮ್ಮ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕಾಗಿತ್ತು. ಬಟ್ಟೆಗಳನ್ನು ಸ್ವಚ್ಛ ಮಾಡುವುದು, ಇಸ್ತ್ರಿ ಮಾಡುವುದು, ಬೂಟುಗಳಿಗೆ ಪಾಲಿಷ್ ಮಾಡುವುದು ಮುಂತಾದವನ್ನೆಲ್ಲ ನಾವು ಸಣ್ಣವರಾಗಿದ್ದಾಗಿಂದಲೇ ಕಲಿತಿದ್ದೆವು. ಜಂಟಿ ಸಂಸಾರಗಳಲ್ಲಿ ಇರುತ್ತಿದ್ದುದರಿಂದ ಮನೆಯಲ್ಲಿ ಪ್ರತಿಯೊಬ್ಬರೂ ಏನಾದರೊಂದು ಕೆಲಸವನ್ನು ಮಾಡುತ್ತಲೇ ಇದ್ದೆವು. ಕುಟುಂಬದ ಸದಸ್ಯರ ನಡುವೆ ಒಂದು ರೀತಿಯ ಬಾಂಡಿಂಗ್ (ಬೆಸುಗೆ) ಇರುತ್ತಿತ್ತು. ಹಿರಿಯರ ಸನಿಹದ ಫಲವಾಗಿ ಹಲವಾರು ವಿಷಯಗಳಲ್ಲಿ ನಮ್ಮ ಜ್ಞಾನವು ಸಾಕಷ್ಟು ವೃದ್ಧಿಯಾಯಿತು. ಕುಟುಂಬದ ಎಲ್ಲಾ ಸದಸ್ಯರು ಒಟ್ಟಾಗಿ ಕುಳಿತು ಊಟವನ್ನು ಮಾಡುತ್ತಿದ್ದ ಕಾರಣದಿಂದ ಪ್ರತಿಯೊಬ್ಬರ ಕಷ್ಟ ಸುಖಗಳನ್ನು ಹಂಚಿಕೊಂಡು ಹಿರಿಯರ ಮಾರ್ಗದರ್ಶನವನ್ನು ಪಡೆಯುತ್ತಿದ್ದೆವು.

ನಮ್ಮ ಪೂರ್ವಜರು ಯಾವುದೇ ಹೊಸ ರೀತಿಯ ಔಷಧಿಗಳಿಲ್ಲದೇ ಎಂಬತ್ತರಿಂದ ತೊಂಬತ್ತು ವರ್ಷ ಜೀವಿಸುತ್ತಿದ್ದರು. ಅವರ ಹಲ್ಲುಗಳು ಗಟ್ಟಿಯಾಗಿರುತ್ತಿದ್ದವು. ದೇಹದಲ್ಲಿ ರೋಗ ನಿರೋಧಕ ಶಕ್ತಿ ಇರುತ್ತಿತ್ತು. ಇದಕ್ಕೆ ಕಾರಣವೆಂದರೆ ಅವರು ಉತ್ತಮ ಆಹಾರವನ್ನು ಕಾಲಕಾಲಕ್ಕೆ ಸೇವಿಸುತ್ತಿದ್ದರು. ಎರಡು ಹೊತ್ತಿನ ಊಟ ಹಾಗೂ ಒಂದು ಉಪಹಾರವನ್ನು ಬಿಟ್ಟರೆ ಬೇರೆ ಆಹಾರಗಳ ಸೇವನೆಯೇ ಇರುತ್ತಿರಲಿಲ್ಲ. ಮನೆಯಲ್ಲಿ ರಾತ್ರಿ ಊಟವಂತೂ ೮ ಗಂಟೆಯ ಒಳಗೇ ಮುಗಿದು ೧೦ ಗಂಟೆಯ ಒಳಗೆ ಲೈಟುಗಳು ಸ್ವಿಚ್ ಆಫ್ ಆಗುತ್ತಿದ್ದವು. ಹೊರಗಿನ ತಿಂಡಿ ತೀರ್ಥಗಳ ಸೇವನೆ ತಿಂಗಳಿಗೆ ಒಂದು ಬಾರಿಯೂ ಆಗುತ್ತಿರಲಿಲ್ಲ. ಪ್ರತಿ ಏಕಾದಶಿಯ ದಿನವೂ ಉಪವಾಸ ಮಾಡುತ್ತಿದ್ದರು. ನಮಗೇನಾದರೂ ಹೊಟ್ಟೆಯ ತೊಂದರೆಯಾದರೆ ಲಂಘನಂ ಪರಮೌಷಧಂ ಎಂದು ಹೇಳಿ ಉಪವಾಸವನ್ನು ಮಾಡಿಸುತ್ತಿದ್ದರು.

ಆಗಿನ ದಿನಗಳಲ್ಲಿ ನಾವು ತಿನ್ನುವ ಆಹಾರವನ್ನು ಇನ್ನೊಬ್ಬರೊಡನೆ ಹಂಚಿಕೊಂಡು ತಿನ್ನುವ ಸಂಪ್ರದಾಯವಿತ್ತು. ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದ ವಿದ್ಯಾರ್ಥಿಗಳು 'ವಾರಾನ್ನ'ಕ್ಕೆಂದು ನಮ್ಮ ಮನೆಗೆ ಬರುತ್ತಿದ್ದರು. ವಾರದಲ್ಲಿ ಎರಡು ಮೂರು ದಿನ ಇಂತಹ ಕೆಲವು ವಿದ್ಯಾರ್ಥಿಗಳು ನಮ್ಮ ಮನೆಗೆ ಬಂದು ಊಟವನ್ನು ಮಾಡಿ ಹೋಗುತ್ತಿದ್ದರು. ಮನೆಯಲ್ಲಿ ಉಳಿದ ಆಹಾರವನ್ನು ರಾತ್ರಿ ಮನೆಯ ಮುಂದೆ 'ಅಮ್ಮಾ ತಾಯಿ, ಕವಳ ಕೊಡಿ ತಾಯಿ' ಎಂದು ಕೂಗುತ್ತಾ ಬರುತ್ತಿದ್ದ ಭಿಕ್ಷುಕರಿಗೆ ಕೊಡುವ ಪರಿಪಾಠವಿತ್ತು. ಆಹಾರವನ್ನು ಉಳಿಸಿ ಚೆಲ್ಲುವುದು, ದಂಡ ಮಾಡುವುದು ಇತ್ಯಾದಿ ಖಂಡನೀಯವಾಗಿದ್ದವು.

ನಮ್ಮ ಹಿರಿಯರು ನಮಗೆ ನೀವು ಮೈಬಗ್ಗಿಸಿ ಕೆಲಸ ಮಾಡಬೇಕು ಎಂದು ಹೇಳುತ್ತಿದ್ದರು. ಪ್ರತಿಯೊಬ್ಬರೂ ತಮ್ಮ ತಮ್ಮ ಮನೆ ಕೆಲಸಗಳನ್ನು ಮಾಡುತ್ತಿದುದ್ದರಿಂದ ದೇಹಕ್ಕೆ ವ್ಯಾಯಾಮ ಸಿಗುತ್ತಿತ್ತು. ನಾವು ಸಣ್ಣವರಾಗಿದ್ದಾಗ ಪ್ರತಿ ಸಂಜೆಯೂ ಆಟದ ಮೈದಾನದಲ್ಲಿಯೇ ಇರುತ್ತಿದ್ದೆವು. ಆಗಿನ ಕಾಲದಲ್ಲಿ ಬಹುತೇಕರ ಮನೆಯಲ್ಲಿ ಕಾರು, ಸ್ಕೂಟರ್ ಇರದಿದ್ದರಿಂದ ಎಲ್ಲೆಡೆ ನಡೆದೇ ಹೋಗಬೇಕಾಗಿತ್ತು. ನಿಗದಿತ ಸಮಯದ ಆಹಾರ ಸೇವನೆ, ವ್ಯಾಯಾಮ, ಶುಚಿತ್ವಕ್ಕೆ ಮಹತ್ವವನ್ನು ನೀಡುತ್ತಿದ್ದ ಕಾರಣದಿಂದ ನಾವೆಲ್ಲರೂ ಸಾಕಷ್ಟು ಆರೋಗ್ಯವಂತರಾಗಿಯೇ ಬಾಲ್ಯವನ್ನು ಕಳೆದೆವು.

ಇಂದು ಬಂದಿರುವ ಗ್ರಾಹಕೀಕರಣದ ಸಂಸ್ಕೃತಿಯಿಂದ ನಾವು ಅವಶ್ಯಕ್ಕಿಂತಲೂ ಹೆಚ್ಚಿನ ವಸ್ತುಗಳನ್ನು ಖರೀದಿಸಿ ಕೊಳ್ಳುಬಾಕರಾಗಿದ್ದೇವೆ. ನಾವು ಸಣ್ಣವರಾಗಿದ್ದಾಗ ಹೀಗಿರಲಿಲ್ಲ. ಹಾಸಿಗೆಯಿದ್ದಷ್ಟು ಕಾಲನ್ನು ಚಾಚಬೇಕು ಎಂದು ಹೇಳುತ್ತಿದ್ದ ನಮ್ಮ ಹಿರಿಯರು ಕಂಡದ್ದನ್ನೆಲ್ಲಾ ಕೊಳ್ಳುವ ಪರಿಪಾಠವನ್ನಿಟ್ಟುಕೊಂಡಿರಲಿಲ್ಲ. ಮನೆಯಲ್ಲಿ ಮೂರು ಜನ ಮಕ್ಕಳಿದ್ದರೆ ಹಿರಿಯ ಮಗ ಧರಿಸಿ ಆತನಿಗೆ ಸಣ್ಣದಾಗಿದ್ದ ಬಟ್ಟೆಗಳನ್ನು ಎರಡನೆಯ ಮಗ ಉಪಯೋಗಿಸಬೇಕಾಗಿತ್ತು. ಹೊಸ ಬಟ್ಟೆ ಬರೆಗಳನ್ನು ಕೊಡಿಸುತ್ತಿದ್ದುದು ಯುಗಾದಿ ಹಾಗೂ ದೀಪಾವಳಿಯ ಸಮಯದಲ್ಲಿಯೇ. ನಮಗೆ ಅತ್ಯಾವಶ್ಯಕವಾದ ವಸ್ತುಗಳನ್ನು ಮಾತ್ರ ನಾವು ಖರೀದಿಸುತ್ತಾ ಇದ್ದೆವು. ಕಂಡದ್ದನ್ನೆಲ್ಲಾ ಖರೀದಿಸಿ ಅನುಭವಿಸಬೇಕೆಂಬ ಇರಾದೆಯೇ ಇರುತ್ತಿರಲಿಲ್ಲ. ನಮ್ಮ ಜೀವನಕ್ಕಾಗಿ ಯಾವ ವಸ್ತುವು ಅತ್ಯಂತ ಅವಶ್ಯಕವೋ ಅವನ್ನು ಮಾತ್ರ ಬಳಸುತ್ತಿದ್ದೆವು.

ಕರೋನಾ ಮಹಾಮಾರಿಯ ಪರಿಣಾಮವಾಗಿ ಉಂಟಾಗಿರುವ ಲಾಕ್ ಡೌನ್

ನಮ್ಮನ್ನು ನಮ್ಮ ಬಾಲ್ಯದ ದಿನಗಳತ್ತ ಕರೆದೊಯ್ದಿದೆ. ನಾವು ಮನೆಯಲ್ಲಿಯೇ ಹೆಚ್ಚಿನ ಕಾಲವನ್ನು ಕಳೆಯುತ್ತಿರುವುದರಿಂದ ನಮ್ಮ ಕುಟುಂಬದವರ ಜತೆಗಿನ ಬಾಂಡಿಂಗ್ ಉತ್ತಮವಾಗುತ್ತಿದೆ. ವೈಯಕ್ತಿಕ ಶುಚಿತ್ವವನ್ನು ಚಾಚೂ ತಪ್ಪದೆ ಅನುಸರಿಸುತ್ತಿರುವ ಕಾರಣ, ಹೊರಗಡೆ ಹೋಗಿ ಜಂಕ್ ಫುಡ್ ತಿನ್ನದಿರುವ ಕಾರಣ ನಮ್ಮ ಆರೋಗ್ಯ ಉತ್ತಮವಾಗುತ್ತಿದೆ. ಅಂಗಡಿ ಮುಂಗಟ್ಟುಗಳು ಮುಚ್ಚಿರುವುದರಿಂದಲೋ ಇಲ್ಲವೇ ಅಲ್ಲಿಗೆ ನಾವು ಹೋಗಲಾರದ ಕಾರಣಕ್ಕಾಗಿಯೋ ನಮಗೆ ಯಾವ ವಸ್ತುವು ಲಭ್ಯವಿದೆಯೋ ಅದನ್ನೇ ಪಾಲಿಗೆ ಬಂದದ್ದೇ ಪಂಚಾಮೃತವೆಂದುಕೊಂಡು ಆನಂದದಿಂದ ಅನುಭವಿಸುತ್ತಿದ್ದೇವೆ. ಮನೆಯಲ್ಲಿ ಯಾವ ಅಡಿಗೆಯನ್ನು ಮಾಡಿದರೂ ಬೇಸರ ಪಟ್ಟುಕೊಳ್ಳದೆ ಅದನ್ನೇ ತಿನ್ನುತ್ತಿದ್ದೇವೆ. ಇನ್ನೊಬ್ಬರಿಗೆ ನೆರವಾಗುವ ಪ್ರವೃತ್ತಿ ಬೆಳೆಯುತ್ತಿದೆ. ನೆರೆ ಹೊರೆಯವರ ಜತೆಗಿನ ಬಾಂಧವ್ಯ ಉತ್ತಮಗೊಳ್ಳುತ್ತಿದೆ.

ನಮಗಿಂತಲೂ ಆರ್ಥಿಕ ಪರಿಸ್ಥಿತಿಯಲ್ಲಿ ಕಡಿಮೆಯಿರುವವರ ಬಗ್ಗೆ ಮರುಕತೋರಿ ಅವರಿಗೆ ಸಹಾಯ ಹಸ್ತವನ್ನು ನೀಡಬೇಕು ಎನ್ನುವ ಮನಸ್ಸು ನಮಗೆ ಬರುತ್ತಿದೆ. ಇಲ್ಲಿ ಸಿನಿಮಾ ತಾರೆ ಅಕ್ಷಯ್‌ಕುಮಾರ್ ಅವರ ಉಲ್ಲೇಖವನ್ನು ಮಾಡಬೇಕಾಗಿದೆ. ಅವರು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ೨೫ ಕೋಟಿ ರೂಪಾಯಿ ಕೊಟ್ಟಾಗ, ಅವರ ಪತ್ನಿ ಇದೇನು ಇಷ್ಟು ಹೆಚ್ಚಿನ ಮೊತ್ತವನ್ನು ಕೊಟ್ಟಿರಲ್ಲಾ ಎಂದು ಕೇಳಿದರಂತೆ. ಆಗ ಅಕ್ಷಯ್‌ಕುಮಾರ್ ಬಡತನದಲ್ಲಿ ಬಾಲ್ಯವನ್ನು ಕಳೆದು ಇಷ್ಟೊಂದು ಹಣವನ್ನು ಗಳಿಸಿದ್ದೇನೆ. ಈಗ ಮತ್ತೆ ಬಡವನಾದರೂ ಚಿಂತೆಯಿಲ್ಲ ಎಂದು ಉತ್ತರಿಸಿದರಂತೆ. ಕೇವಲ ಅಕ್ಷಯ್ ಕುಮಾರ್ ಒಬ್ಬರೇ ಅಲ್ಲ, ಹಲವಾರು ಸಾವಿರ ಮಂದಿ ತಮ್ಮ ವೈಯಕ್ತಿಕ ಆರ್ಥಿಕ ಪರಿಸ್ಥಿತಿಯು ಏನೇ ಇರಲಿ, ಕರೋನಾದ ಪರಿಣಾಮದಿಂದ ನೊಂದವರ ನೆರವಿಗೆ ಧಾವಿಸುತ್ತಿದ್ದಾರೆ. ಇಲ್ಲದವರ ಬಗ್ಗೆ ಮನ ಮಿಡಿಯುವುದನ್ನು ಕರೋನಾ ಕಲಿಸಿದೆ.

ಕರೋನಾದ ಫಲವಾಗಿ ಉಂಟಾಗಿರುವ ಲಾಕ್ ಡೌನ್ ನಮ್ಮ ಪೂರ್ವಿಕರ ಸಂಪ್ರದಾಯಗಳತ್ತ ನಮ್ಮನ್ನು ಮರಳಿ ಒಯ್ದು ಸರಳ ಜೀವನದ ಪಾಠವನ್ನು ನಮಗೆ ಮತ್ತೆ ಕಲಿಸಿ ನಮ್ಮಲ್ಲಿ ಮಾನವೀಯತೆಯು ಮಿಡಿಯುವಂತೆ ಮಾಡಿದೆ. ಕರೋನಾಗೆ ಥಾಂಕ್ಸ್ ಎಂದು ಹೇಳೋಣವೇ? ■



ಕೃಪೆ: ಡೌನ್ ಟು ಅರ್ತ್

ಶಂಖದಿಂದ ಬಂದದ್ದು. . . . .

● **ಎಚ್.ಗೋಪಾಲಕೃಷ್ಣ**

ನಮ್ಮ ಆರನೇ ಬ್ಲಾಕಿನ ಮೂರನೇ ರಸ್ತೆಯ ನಾಲ್ಕನೇ ಮನೆಯ ಹಿಂಭಾಗದಲ್ಲಿ ನಮ್ಮ ಪೋಲೀಸು ಪುಲಕೇಶಿ ಇರೋದು.ಆತನ ಸಂಗತಿ ಇದುವರೆಗೂ ನಿಮಗೆ ತಿಳಿಸಿದ ನೆನಪು ನನಗೆ ಇಲ್ಲ.ನಿಮಗೆ ಯಾಕೆ ತಿಳಿಸಿಲ್ಲ ಅಂದರೆ ಆತ ಅಂತಹ ದೊಡ್ಡ ಮನಸ ಅಲ್ಲ ಅಂತ ಅಲ್ಲ.ಈ ತನಕ ಅವನ ವಿಷಯ ನಿಮಗೆ ಹೇಳುವ ಸಂದರ್ಭ ಬಂದಿರಲಿಲ್ಲ ಅಂತ ಇಟ್ಕೊಳ್ಳಿ.ಇದು ಹಾಗಿರಲಿ

ಮೊನ್ನೆ ಕೊರೊನಾ ವೈರಸ್ಸು ಇಡೀ ಭೂಮಂಡಲ ವ್ಯಾಪಿಸಿಕೊಂಡು ನಮ್ಮ ದೇಶಕ್ಕೂ ವಕ್ಕರಿಸಿ ಬಿಡ್ತಲ್ಲಾ ಆಗ ಅದರ ಎಫೆಕ್ಟು ತಟ್ಟಿದ ಮೊದಮೊದಲಿನ ನಾಗರಿಕರಲ್ಲಿ ನನ್ನ ಹೆಸರು ಮೊದಲು.ಅದು ಹೇಗಪ್ಪಾ ಅಂದರೆ ನಾನು ಬೆಳಗ್ಗೆ ವಾಕಿಂಗು ಪಾಕಿಂಗು ಅಂತ ಹೋಗ್ತೀನಲ್ಲಾ ಅದು ಬೇಡ ಅಂತ ಮನೇಲಿ ಫತ್ವಾ ಆಯ್ತು. ಫತ್ವಾ ಯಾಕೆ ಅಂದರೆ ವೈರಸ್ಸು ಸೀನಿಯರ್ ಸಿಟಿಜನ್ ಗಳಿಗೆ ಮೊದಲು ಅಂಟುತ್ತೆ,ಅಲ್ಲಿಂದ ಮನೇಲಿ ಮಿಕ್ಕವರಿಗೆ ಬರುತ್ತೆ ಅಂತ.ಇದರ ಕಾರಣ ಹೇಳಿ ಮನೇಲಿ ನನಗೆ ಕ್ವಾರಂಟೈನ್ ಆಯ್ತೂರೀ.ಎಲ್ಲೂ ಹೋಗೋ ಹಾಗಿಲ್ಲ,ಎಲ್ಲೂ ಬರೋ ಹಾಗಿಲ್ಲ. . . . ಹೀಗೆ.

ಈ ವಯಸ್ಸಲ್ಲಿ ಅದೇನು ಬೇಕಾದರೂ ಬಿಡು ಅನ್ನಲಿ ಬಿಟ್ಟೇನು ಆದರೆ ವಾಕಿಂಗು ಬಿಡೋದು ಸಾಧ್ಯವೇ ? ವಾಕಿಂಗ್‌ಗಿಂತಲೂ ಹೆಚ್ಚಾಗಿ ವಾಕಿಂಗ್ ಮುಗೀತಾ ಮುಗೀತಾ ಕೃಷ್ಣ ಉಪಹಾರಿನ ಷುಗರ್ ಲೆಸ್ ಕಾಫಿ ಅದಕ್ಕೆ ಮೊದಲು ಒಂದು ಕೇಸರೀ ಭಾತು,ಎರಡು ವಡೆ ಬಿಡೋಕ್ಕೆ ಆಗುತ್ಯೇ ?ಅದರಿಂದ ನಾನು ಅದೇನು ಉಪಾಯ ಮಾಡಿದೆ ಅಂದರೆ ಬೆಳಗ್ಗೆ ಬೇಗಲೇ ಹಾಲು ತರ್ತೀನಿ,ಆಗ ಪೋಲೀಸು ಗೀಲೀಸು ಯಾರೂ ಇರುಲ್ಲ. ಬಿಸಿಲು ಏರಿದ ಮೇಲೆ ಎಲ್ಲೂ ಹೋಗೋಲ್ಲ ತೆಪ್ಪಗೆ ಮನೇಲೇ ಇರ್ತೀನಿ,ಸಾರಿಸೋದು ಗುಡಿಸೋದು ಬಟ್ಟೆ ಒಗೆಯೋದು ಪಾತ್ರೆ ತೊಳೆಯೋದು. . . . ಈ ಕೆಲಸ ಎಲ್ಲಾ ನಂದು . . . . ಅಂತ ಒಪ್ಪಂದ ಮಾಡಿಕೊಂಡೆ.ಸರಿ ಅಂತ ವಾಕಿಂಗ್ ಪರ್ಮಿಷನ್ ಗಿಟ್ಟಿಸಿದೆ.

ಆಗ ಬೆಳಗ್ಗೆ ಹಾಲು ತರಕ್ಕೆ ಒಪ್ಪಿದನಾ ?ಪ್ರಾಬ್ಲಮ್ ನನಗೆ ಶುರು ಆಗಿದ್ದು ಇಲ್ಲಿ. ಕಾಫಿ ಕುಡಿಯೋ ಹೋಟಲು ಕೊರೋನಾ ಅಂತ ಅದೂ ಮುಚ್ಚಿರಬೇಕೇ ?ಸರಿ ಬೇರೆ ದಾರಿ ಇಲ್ಲದೇ ಯಾವ ಗಲ್ಲೀಲಿ ಹೋಟಲು ತೆಗೆದಿದೆ ಅಂತ ಹುಡುಕಿ ಹೊರಟನಾ? ಸುಮಾರು ಗಲ್ಲಿ ಸುತ್ತಿ ಎಲ್ಲೂ ಕಾಫಿ ಹೋಟಲು ತೆಗೆದಿರೋದು ಕಾಣಿಸದೇ ಮನೇಗೆ ಹೊರಟನಾ? ಮನೆ ಮುಂದೆ ರಂಗೋಲಿ ಹಾಕ್ತಾ ಇದ್ದ ಮೇಡಂ ಒಬ್ಬರು ತಲೆ ಎತ್ತಿ ನನ್ನನ್ನ ನೋಡಿದರು.

ಸಾರ್, ಚೆನ್ನಾಗಿದೀರಾ ? ಅಂತ ಕೇಳಿದರು.

ಮೇಡಂ ಅವರನ್ನ ಎಲ್ಲಿ ನೋಡಿದೀನಿ ಅಂತ ನೆನಪಾಗಲಿಲ್ಲ.

ಚೆನ್ನಾಗಿದೀನಮ್ಮಾ, ನೀವು ? ಅಂದೆ.

ನಾವೂ ಫೈನು ಸಾರ್.ಬನ್ನಿ ಒಳಗೆ   ಅಂದರು.

ಇನ್ನೊಂದು ದಿನ ಬರ್ತೀನಿ ಅಮ್ಮ ಅಂತ ಹೆಜ್ಜೆ ಮುಂದಿಟ್ಟೆ.

ಬನ್ನಿ ಸಾರ್,ಕಾಫಿ ಕೊಡ್ತೀನಿ. . . . ಅಂದರು.

ಕಾಫಿ ಅಂದರೆ ಯಾವ ಬೇಕೂಫ ಬೇಡ ಅಂತಾನೆ ? ಯಾರೋ ಗೊತ್ತಿಲ್ಲ ಪರಿಚಯ ಇಲ್ಲ ಅವರು,ಒಳಗಡೆ ಕೂಗಿ ತಲೆ ಮೇಲೆ ರಾಡಿಂದ ಹೊಡೆದು ಜೇಬಿಂದ ಕಾಸು ಹೊಡೆದರೆ ಅಂತ ಒಂದು ಕೆಟ್ಟ ಯೋಚನೆ ತಲೇಲಿ ಬಂತು.ಜೇಬಲ್ಲಿ ಬರೀ ನೂರು ರೂಪಾಯಿ ಇದೆ, ಹೋದರೆ ಹೋಗಲಿ.ಈ ಕಾರಣ ಇಟ್ಟುಕೊಂಡು ಕಾಫಿ ಮಿಸ್ ಮಾಡಿಕೊಂಡರೆ ನನಗಿಂತ ಮುಠ್ಠಾಳ ಇಡೀ ಪ್ರಪಂಚದಲ್ಲಿ ಬೇರೆ ಇಲ್ಲ. ಅಕಸ್ಮಾತ್ ನಿಜವಾಗಲೂ ಕಾಫಿ ಕೊಟ್ಟರೆ ? ಟೇಕ್ ದಿ ರಿಸ್ಕ್ ಅಂತ ಅಂತರಾತ್ಮ ಅಪ್ಪಣೆ ಕೊಡ್ತು.

ನನ್ನಪಾಡು ನೋಡಿ ದೇವರೇ ಕೊಟ್ಟಿರೋ ಅವಕಾಶ ಮತ್ತು ಆಹ್ವಾನ ಇದು ಅಂತ ಅಂದುಕೊಂಡು ಅವರ ಹಿಂದೆ ಅವರ ಮನೆ ಒಳಗೆ ಹೋದೆ.

ಒಳಗಡೆ ಸೋಫಾ ಮೇಲೆ ಕೂತೆ.ಎದುರು ಗೋಡೆ ಮೇಲೆ ಕಣ್ಣು ಹಾಯಿಸಿದೆ.

ಪುಲಿಕೇಶಿ ಜತೆಗೆ ಈಯಮ್ಮ ಇರೋ ಫೋಟೋ ಗೋಡೆ ಮೇಲೆ ಕಾಣಿಸಬೇಕೇ? ಅವರು ಅಂದರೆ ಆ ಹೆಂಗಸು ಪೋಲಿಸಪ್ಪನ ಹೆಂಡತಿಯೇ ? ಯಾಕೆ ಮರೆತೆ ?

ನನ್ನ ತಲೆಗೆ ಏನಾಗಿದೆ ಅನಿಸಲು ಶುರುವಾಯಿತು.ಅಂದ ಹಾಗೆ ಈ ಹುಡುಗಿ ಹೆಸರೇನು? ಸಹನಾ , ಶಶಿಕಲಾ , ಸುಮ, ಶಕುಂತಲಾ, ಸರೋಜಾ, ಸಂಧ್ಯಾ, ಲಲಿತಾ, ಶೈಲಜಾ, ಜಗದಾಂಬಾ. . . . ಹೀಗೆ ಹೆಸರುಗಳ ಮೆರವಣಿಗೆ ತಲೆಯಲ್ಲಿ ನಡೀತಾ ಇತ್ತು.

ಸಾರ್, ಕಾಫಿ ತಗೊಳ್ಳಿ.. ಅಂತ ಕಾಫಿ ಲೋಟ ಮುಂದೆ ಇಟ್ಟಿತು ಹುಡುಗಿ. ಹುಡುಗಿ ಹೆಸರು ತಲೇಲಿ ಮಿಂಚು ಹೊಡೆದ ಹಾಗೆ ಹೊಡೀಬೇಕೇ ?

ಅಲ್ಲಮ್ಮಾ ಸರಸಿ, ನಾನು ಇಂಥವಳು ಅಂತ ಹೇಳದೇ ಕನ್ಫ್ಯೂಸ್ ಮಾಡಿದೆಯಲ್ಲಾ ತಾಯೀ . . . ಅಂದೆ.

ಸಾರ್ . . .ಅಂದಳು.

ಸಾರ್ ಅಲ್ಲಮ್ಮಾ ಮೊದಲಿನ ಹಾಗೇ ಅಂಕಲ್ಲು ನಾನು. . . . ಅಂದೆ.

ಅಲ್ಲಾ ಅಂಕಲ್, ನಿಮ್ಮನ್ನ ನೋಡಿದ ಕೂಡಲೇ ನಾನು ಸ್ಮೈಲ್ಮಾಡಿದೆ. ನಿಮಗೇನೋ ಯೋಚನೆ ಅದರಲ್ಲಿ ಮುಳುಗಿದ್ದಿರಿ. . . ಅಂದಳು.

ಅಮ್ಮಾ ನಿಜ ಹೇಳಬೇಕು ಅಂದರೆ ಕಾಫಿ ಇಲ್ಲದೇ ಇಡೀ ಪ್ರಪಂಚ ಶೂನ್ಯ ಆಗಿತ್ತು. . . . ಅಂದೆ.

ಆಕೆ ನಕ್ಕಳು.

ಕಾಫಿ ಕುಡೀತಾ ಎಲ್ಲಿ ಯಜಮಾನರು . . . . ಅಂದೆ

ಡ್ಯೂಟಿ ಮೇಲೆ ಹೋಗಿದಾರೆ, ಮೂರು ವಾರ ಆಯ್ತು ಮನೆಗೆ ಬಂದು... ಅಂದಳು.

ಮೂರು ವಾರವೇ, ಅದೇನು ಬೇರೆ ಊರಿಗಾ. . . ?

ಇಲ್ಲ ಅಂಕಲ್, ಇಲ್ಲೇ ಕೊರೊನಾ ಡ್ಯೂಟಿ. . .

ಕೊರೋನಾ ಮೇಲೆ ಕೆಲಸಕ್ಕೆ ಹೋಗಿರೋರ ಪಾಡು ನನ್ನ ಮಗಳು ಹೇಳ್ತಾ ಇರ್ತಾಳೆ. ಮನೇಗೆ ಬರೋ ಹಾಗಿಲ್ಲ, ದಿನಗಟ್ಟಲೆ ಊಟಇರುಲ್ಲ, ಬಿಸಿಲಿನಲ್ಲಿ ಒದ್ದಾಡ್ತಾರೆ. . . . ಮೊದಲಾದ ಕಥೆಗಳು.

ಎಲ್ಲಿ ಹಾಕಿದ್ದಾರಮ್ಮಾ ಡ್ಯೂಟಿಗೆ ಅಂದೆ.

ಇಲ್ಲೇ ಕೋಲಾರ ಹತ್ತಿರ ಅಂತೆ. ರಸ್ತೆ ಕಾಯೋ ಡ್ಯೂಟಿ, ಜನ ಹೇಳಿದ್ದು ಕೇಳೋದಿಲ್ಲ, ಕೈಮುಗಿದು ಬೇಡಿಕೊಂಡು ಮನೇಲೇ ಇರ್ರೋ ಅಂದರೂ ತಮಾಷೆ ನೋಡೋಕ್ಕೇ ಅಂತ ರಸ್ತೆಗೆ ಬರ್ತಾರಂತೆ.ಪಾಪ ಇವರಿಗೂ ಹೇಳಿ ಹೇಳೀ ಬೇಜಾರು ಹತ್ತಿದೆ ಅಂತೆ. ಅದಕ್ಕೇ ಈಗ ಲಾಠಿ ಬೀಸ್ತಾರಂತೆ. . . ಅಂತ ಒಂದೇ ಉಸುರಿಗೆ ಹೇಳಿದಳು.

ಸರೀಮ್ಮಾ ಮೂರು ವಾರ ಅದು ಹೇಗೆ ನಿಮ್ಮನ್ನ ಬಿಟ್ಟಿದ್ದಾನೆ ಅವನು? ದಿನಾ ಮನೇಗೆ ಬಂದು ಹೋಗೋನು, ಅದೂ ಮಕ್ಕಳು ಹೇಗಿವೆಯಮ್ಮಾ ಅಪ್ಪನ್ನ ನೋಡದೇ?

ಅಯ್ಯೋ ಅಂಕಲ್, ಡ್ಯೂಟಿ ನೋಡಿ ಹಾಗಿದೆ.ಮಕ್ಕಳನ್ನ ನೋಡಬೇಕು ಅನಿಸುತ್ತೆ ಕಣೇ ಅಂತ ಫೋನು ಮಾಡಿದಾಗ ಕೇಳಿ ಅವುಗಳ ಜತೆ ಒಂದೆರೆಡು ನಿಮಿಷ ಮಾತಾಡ್ತಾರೆ ಅಷ್ಟೇ. ಡ್ಯೂಟಿ ಮುಗಿದ ಮೇಲೆ ಮನೇಗೆ ಹೋಗಿದ್ದು ಬಾ ಬೇಕಾದರೆ ಲೇಟಾಗೇ ಬಾ ಅಂತ ಅವರ ಇನ್‌ಸ್ಪೆಕ್ಟೆರು ಹೇಳ್ತಾರಂತೆ.ಇವರಿಗೆ ಮನೇಗೆ ಬರೋಕ್ಕೆ ದಿಗಿಲು. . . .

ಅಯ್ಯೋ ಹುಡುಗಿ, ನಿನ್ನ ಕಂಡರೆ ಅಷ್ಟು ಹೆದರ್ತಾನೇನೇ? ಅಂತ ಒಂದು ತಮಾಷೆ ಮಾಡಿದೆ. ಹುಡುಗಿ ಕಣ್ಣಲ್ಲಿ ನೀರು ಮಡುಗಟ್ಟಿತ್ತು.

ನನ್ನ ಕಂಡರೆ ಹೆದರೋದೇ ? ನೀವೂ ಸರಿ. . . ಅಂತ ಕಣ್ಣು ಒರೆಸಿಕೊಂಡಳು.

ಮನೇಗೆ ಬಂದರೆ ಮಕ್ಕಳನ್ನ ಮುದ್ದು ಮಾಡಬೇಕು ಅನಿಸುತ್ತಂತೆ. ಮುದ್ದು ಮಾಡಿ ಅವಕ್ಕೇ ಕೊರೊನಾ ಅಂಟಿಕೊಂಡರೆ ಅಂತ ಅವರಿಗೆ ಚಿಂತೆ. . . . ಈಗ ಕಣ್ಣಿಂದ ನೀರು ಧಾರಾಳವಾಗೇ ಹರೀತು.

ಅಳಬೇಡ ಮಗು, ಗಂಡ ಹುಷಾರಾಗಿದ್ದಾನಲ್ಲಾ. . . . ಮಿಲಿಟರಿ ಅವರು ಡೂಟಿ ಮೇಲೆ ಹೋದರೆ ವರ್ಷಗಟ್ಟಲೆ ಮನೆ ಮಠ ನೋಡೋಲ್ಲ ಅಂತ ಸಮಾಧಾನ ಪಡಿಸಲು ಯತ್ನಿಸಿದೆ.

ಕೊಂಚ ಸಮಾಧಾನಕ್ಕೆ ಬಂದಳು. ಜನ ಸರ್ಕಾರದ ಮಾತು ಕೇಳಿಕೊಂಡು ತೆಪ್ಪಗೆ ಮನೇಲೇ ಇದ್ದರೆ ಎಷ್ಟು ಜನರಿಗೆ ನೆಮ್ಮದಿ ಅನಿಸಿತು.

ಫೋನು ಮಾಡ್ತಾನಾ ದಿನಾ ? ಅಂದೆ.

ಮೊದಲು ಮಾಡ್ತಾ ಇದ್ದರು.ನಾನೂ ಮಾಡ್ತಾ ಇದ್ದೆ. ಕೆಲವು ಸಲ ಸಿಗ್ನಲ್ ಸಿಗಲ್ಲ. ಅದರ ಜತೆಗೆ ನನ್ನ ಫೋನಿಂದು ದುಡ್ಡು ಮುಗಿದು ಹೋಗಿದೆ. ಹಾಕಿಸಬೇಕು. . .

ಅಂದಳು.

ಕೊಡು ಫೋನು. . . ಅಂದೆ.

ಒಳಗಡೆ ಹೋಗಿ ಫೋನು ತಂದಳು, ಜತೆಗೆ ಕ್ರೆಡಿಟ್ ಕಾರ್ಡು ! ಇರಿ ಇದರದ್ದು ನಂಬರು ಹೇಳ್ತೀನಿ ಅಂತ ಫೋನು ನಂಬರು ಯಾವ ಕಂಪನಿಗೆ ಹಣ ತುಂಬ ಬೇಕು ಅಂತ ಹೇಳಿ ಇದರ ಪಾಸ್ ವರ್ಡ್ ತರ್ತೀನಿ ಅಂತ ಕಾಫಿ ಲೋಟ ತಗೊಂಡು ಒಳಗೆ ಹೋದಳು.

ಅಯ್ಯೋ ಪಾಪ ಅನಿಸಿಬಿಡ್ತು. ಅವಳು ಆಚೆ ಬರೋ ಅಷ್ಟರಲ್ಲಿ ನನ್ನ ಕಾರ್ಡು ತೆಗೆದು ಮೂರು ತಿಂಗಳ ಹಣತುಂಬಿದೆ.

ಅಂಕಲ್ ಅದರದ್ದು ನಂಬರು . . .ಅವಳ ಮಾತು ಅರ್ಧದಲ್ಲೇ ತಡೆದೆ.

ತುಂಬಿ ಆಗಿದೆ ಕಣೇ ಹುಡುಗಿ,ಬೇಜಾರು ಅನಿಸಿದರೆ ಮನೇಗೆ ಬಾ ಮಕ್ಕಳನ್ನೂ ಕರಕೊಂಡು. ಒಬ್ಬಳೇ ಇದ್ದು ಚಿಂತೆ ಪಡಬೇಡ. ಎಲ್ಲಾ ಸರಿ ಹೋಗುತ್ತೆ. ಇದೊಂದು ಕೆಟ್ಟಕಾಲ ಅಷ್ಟೇ. ಎಂಥೆಂಥ ಕಷ್ಟವನ್ನೋ ಅನುಭವಿಸಿದ್ದೀವಿ,ಇದೇನು ಮಹಾ? ಯಜಮಾನ ಫೋನು ಮಾಡಿದಾಗ ನಾನು ಕೇಳಿದೆ ಅಂತ ಹೇಳು,ಯೋಚನೆ ಬೇಡ ನಾವೆಲ್ಲಾ ಇದ್ದೀವಿ ಹತ್ರಾನೇ ಅಂತಲೂ ಸೇರಿಸು. . . . ಬರಲಾಮ್ಮಾ ಅಂತ ಗೇಟಿನಿಂದ ಆಚೆ ಬಂದೆ.

ಸರಸಿ ಹಿಂದೇನೇ ಬಂದಳು.

ಅಂಕಲ್ ಹೀಗೆ ಹೇಳ್ತೀನಿ ಅಂತ ಬೇಜಾರು ಮಾಡ್ಕೋಬೇಡಿ. . . ಅಂದಳು . ನಿಂತೆ ಹಿಂದೆ ತಿರುಗಿ ಹೇಳೇ ಹುಡುಗಿ, ಅದೇನು ? ಅಂದೆ.

ಆಚೆ ಓಡಾಡಬೇಡಿ, ಮನೇಲೇ ಇರಿ ಅಂತ ಅಷ್ಟೊಂದು ಸಲ ಟೀವೀಲಿ ಹೇಳ್ತಾರೆ, ಪೇಪರಿನಲ್ಲಿ ಬರೀತಾರೆ. ವಯಸ್ಸಾದೋರಿಗೆ ಹೆಚ್ಚಿಗೆ ರಿಸ್ಕು ಅಂತ ದಿವಸಕ್ಕೆ ಕೋಟಿ ಸಲ ಎಚ್ಚರಿಕೆ ಕೊಡ್ತಾರೆ. ಯಾಕೆ ಒಂದು ಹದಿನೈದು ದಿನ ಮನೇಲೇ ಇರಬಾರದು ಅಂಕಲ್? ಅನ್ನಬೇಕೇ !

ಹೌದಮ್ಮಾ ಸರಿ ನೀನು ಹೇಳೋದು ಅಂತ ಹೇಳಿ ಗೇಟಿಂದ ಆಚೆ ಬಂದೆನಾ?

ಅಜ್ಜನಿಗೆ ಮೊಮ್ಮಗಳು ಕೆಮ್ಮೋದು ಹೇಳಿಕೊಟ್ಟಳಂತೆ ಅನ್ನೋ ಮಾತು ಜ್ಞಾಪಕಕ್ಕೆ ಬರಬೇಕೇ ? ಇದನ್ನ ಮನೇಗೆ ಹೋಗಿ ಹೇಳಿದರೆ ಮನೆ ಅವರ ರಿ ಆಕ್ಷನ್ ಏನಿರಬಹುದು? ಶಂಖದಿಂದ ಬಂದರೇ ತೀರ್ಥ ಅಂತಾರಾ?

ನಾಳೆಯಿಂದ ತೆಪ್ಪಗೆ ಮನೇಲೇ ಇರೋದು ಅಂತ ಅಂದುಕೊಂಡೆ.

■


50 ಮಿಲಿಯನ್
ಬಳಕೆದಾರರನ್ನು ತಲುಪಿದ
'ಆರೋಗ್ಯ ಸೇತು' ಆಪ್


Brazil Cites Lord Hanuman's Sanjeevani Example To Request India For Hydroxychloroquine

ಅವಿಶ್ರಾಂತ ಅಜ್ಞಾತ ಯೋಧರು

• **ಜಯಕುಮಾರ್ ಮರಿಯಪ್ಪ**

ಎಂ.ಡಿ. ಸೀಟಿಗೆ ಪ್ರಯತ್ನಿಸುವ ವೈದ್ಯರು ಸೀಟು ದೊರೆತರೂ ಹೋಗದೇ ಇರುವ ವಿಭಾಗವೆಂದರೆ ಜನರಲ್ ಹೆಲ್ತ್. ಆದರೆ ಈ ಕರೋನದಂತಹ ಮಹಾ ಮಾರಿ ಹಬ್ಬಿದಾಗ ಅದನ್ನು ನಿರ್ವಹಣೆ ಮಾಡಲು, ಅದು ಹರಡದಂತೆ ಕಾಪಾಡಲು ಹಾಗು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲು ಬಹಳ ಮುಖ್ಯವಾದ ವೈದ್ಯ ವಿಭಾಗವೆಂದರೆ ಜನರಲ್ ಹೆಲ್ತ್. ಆದರೆ ನಮ್ಮ ಯುವ ಡಾಕ್ಟರರಿಗೆ ಇದು ಅಷ್ಟೊಂದು ಆಕರ್ಷಕವಾಗದೇ ಇರುವುದು ಒಂದು ವಿಷಾದದ ಸಂಗತಿ. ಹಾಗೆಯೇ ಈ ವಿಭಾಗದ ಕಾರ್ಯಕರ್ತರ ಬಗ್ಗೆ ಜನ ಸಾಮಾನ್ಯರ ತಿಳಿವಳಿಕೆಯೂ ಕಮ್ಮಿ ಇರುವುದೂ ಮತ್ತೊಂದು ವಿಷಾದ. ಆದ್ದರಿಂದ ಈ ಲೇಖನ ಬರೆಯುತ್ತಿದ್ದೇನೆ.

ನಾನು ಒಬ್ಬ ಆರೋಗ್ಯ ಇಲಾಖೆಯ ಜಿಲ್ಲಾ ಆರೋಗ್ಯ ಅಧೀಕ್ಷಕರ ಮಗ. ಇಂತಹುದೊಂದು ಹುದ್ದೆ ಇದೆಎಂದು ಎಷ್ಟು ಜನರಿಗೆ ಗೊತ್ತೋ ತಿಳಿಯದು. ಹಳ್ಳಿ ಹಳ್ಳಿಗೂ ಸೈಕಲ್ಲಿನಲ್ಲಿ ಹೋಗಿ ಅಲ್ಲಿನ ಗೌಡರ ಅಥವಾ ಪಟೇಲರ ಮನೆಯಲ್ಲಿ ಉಳಿದು, ದಿನವಿಡೀ ಮನೆ ಮನೆಗೆ ಹೋಗಿ ಕಜ್ಜಿತುರಿ ಇಸುಬು ಕೆಮ್ಮು ನಾಯಿಕೆಮ್ಮು ಚಳಿಜ್ವರ ವಾಂತಿ ಬೇಧಿ ಮುಂತಾದ ಪ್ರಕರಣಗಳ ತಪಾಸಣೆ ಮಾಡಿ ಮುಲಾಮು ಕೊಟ್ಟು ಮಾತ್ರೆ ಕೊಟ್ಟು ಜ್ವರ ಬಂದವರ ರಕ್ತದ Smear ಪಡೆದು ಜಿಲ್ಲಾ ಪ್ರಯೋಗಾಲಯಕ್ಕೆ ಕಳುಹಿಸುತ್ತಿದ್ದರು. ಹಾಗೆಯೆ ಪ್ರಕರಣಗಳ ನಕಾಶೆ ಹಾಗು ಲೆಕ್ಕದ ವರದಿ ತಯಾರಿಸುತ್ತಿದ್ದರು. ವೈದ್ಯರ ಶಿಬಿರಕ್ಕೆ ಶಿಫಾರಸು ಮಾಡುತ್ತಿದ್ದರು. ಅಪೌಷ್ಟಿಕತೆ ಇರುಳುಗಣ್ಣು (ಎ ಜೀವಸತ್ವ ಕೊರತೆ) ಜಂತುಹುಳು ಬಾಧೆ, ಬರಿಗಾಲು ನಡೆಯುವುದರಿಂದ ಕೊಕ್ಕೆ ಹುಳದ ಬಾಧೆ ಗಳಿಗೆ ತಮ್ಮ ಬಳಿ ಇರಿಸಿಕೊಂಡಿದ್ದ ಮಾತ್ರೆ ಮುಲಾಮುಗಳನ್ನು ಕೊಟ್ಟು ರೋಗ ನಕಾಶೆ ವಿವರವನ್ನು ಜಿಲ್ಲಾ ವೈದ್ಯಾಧಿಕಾರಿಗಳಿಗೆ ಒದಗಿಸುತ್ತಿದ್ದರು. ಅವರೊಡನೆ ಬೇಸಿಕ್ ಹೆಲ್ತ್‌ವರ್ಕರ್ (ಇಂದು ಅವರೇ ಆಶಾ ಕಾರ್ಯಕರ್ತರು ಇರಬೇಕು) ತಂಡವೇ ಇರುತ್ತಿತ್ತು. ಭೇಟಿ ನೀಡಿದ ಮನೆ ಮೇಲೆ ಆಂಕಣಗಳನ್ನು ಬರೆದು ತಿಂಗಳು ತಿಂಗಳ ವಿವರ ಬರೆಯುತ್ತಿದ್ದರು.

೧೯೩೩ ರಲ್ಲಿ ಕೆಲಸಕ್ಕೆ ಸೇರಿದ ನಮ್ಮ ತಂದೆ ಸ್ವತಃ ಪ್ಲೇಗು ಮಲೇರಿಯಾ ಸಿಡುಬು ರೋಗಗಳಿಗೆ ತುತ್ತಾಗಿ ದೇವರ ಕರುಣೆಯಿಂದ ಪಾರಾದವರು. ಆ ಎಲ್ಲ ರೋಗಗಳು ತಮ್ಮ ಕುರುಹನ್ನು ಬಿಟ್ಟು ಹೋಗಿದ್ದವು, ಬಲ ಕಂಕುಳಲ್ಲಿ ಬಂದ ಪ್ಲೇಗು ಗೆಡ್ಡೆ ಬಂದು ಬಲಗೈ ಬಲಗುಂದಿತ್ತು. ಶಾಲೆಯಲ್ಲಿ ಎಡಗೈ ಬೋಲರ್ ಆಗಿದ್ದರು. ಬಲಗಡೆಯಿಂದ ಸೈಕಲ್ ಹತ್ತುತ್ತಿದ್ದರು. ಆದರೆ ಸೋದರಿಯರನ್ನು ನೆಂಟರನ್ನು ಪಿಡುಗುಗಳ ಕಾರಣದಿಂದ ಕಳೆದುಕೊಂಡ ಅವರು ಉದ್ದೇಶ ಪೂರ್ವಕವಾಗಿ ಸ್ಯಾನಿಟರಿ ಇನ್ಸಪೆಕ್ಟರ್ ಸೇವೆ ಸೇರಿದರು.

ಸೇರಿದಾಗ ಅವರ ಮೊದಲ ಸೇವೆ ನ್ಯಾಷನಲ್ ಮಲೇರಿಯಾ ಕಂಟ್ರೋಲ್ ಪ್ರೋಗ್ರಾಂ (NMCP) ನಲ್ಲಿ. ಅದೂ ಬ್ರಿಟಿಷ್ ಅಧಿಕಾರಿಗಳ ಅಡಿಯಲ್ಲಿ. ಅವರ ನಿಷ್ಠೆ ಮತ್ತು ಶ್ರದ್ಧೆ ಇವರು ಕಲಿತ ಮೊದಲ ಪಾಠ. ಪ್ರತಿ ಹಳ್ಳಿಗೂ ಹೋಗಿ ಡಿಡಿಟಿ ಸ್ಪ್ರೇ ಮಾಡಿಸುವ ಕಾರ್ಯ. ಹಾಗೆಯೇ ಪ್ರತಿಯೊಬ್ಬರ ರಕ್ತದ ಮಾದರಿ ಸ್ಲೈಡುಗಳಲ್ಲಿ ಸಂಗ್ರಹಿಸಿ ತರಬೇಕಿತ್ತು. ಮುಂದೆ NMCP ಹಾಗೆಯೇ ಕಾರ್ಯಕ್ರಮದಲ್ಲೂ ಮುಂಚೂಣಿಯಲ್ಲಿ ದುಡಿದರು.

ಇನ್ನು ಪ್ಲೇಗು ಮಾರಿ ಬಂದಾಗ ಹಳ್ಳಿಗಳಲ್ಲಿ ಮತ್ತು ಅವುಗಳ ಸುತ್ತಮುತ್ತಲ ಬಯಲಿನಲ್ಲಿ ಬಿಲಗಳ ಅಧ್ಯಯನ ಮಾಡಿ ಏಳೆಂಟು ಬಿಲಗಳನ್ನು ಮುಚ್ಚಿ ಒಂದು ಬಿಲಕ್ಕೆ ಕೊಳವೆ ತೂರಿಸಿ ಬಿಗಿ ಮಣ್ಣು ಮುಚ್ಚಿ ಅದರಿಂದ ಸಯನೋಗ್ಯಾಸ್ ಅನಿಲವನ್ನು ಬಿಟ್ಟು ಅಡಗಿದ್ದ ಇಲಿಗಳನ್ನು ಕೊಲ್ಲುತ್ತಿದ್ದರು. ಇದೊಂದು ಯಶಸ್ವಿ ನಿಯಂತ್ರಕ ಕ್ರಮವಾಗಿತ್ತು. ಹಾಗೆ ವಿಷಾನಿಲವಾದ್ದರಿಂದ ಬಹಳ ಎಚ್ಚರ ವಹಿಸಬೇಕಾಗಿತ್ತು. ನರಸಿಂಹರಾಜಪುರ (ಕೊಪ್ಪ)ದಲ್ಲಿ ಹೀಗೆ ಮಾಡುತ್ತಿದ್ದಾಗ ಯಾವುದೋ ಒಂದು ಬಿಲದಿಂದ ನಾಗರ ಹಾವು ಹೊರಬಂದಿತಂತೆ ಹಾಗೆ ಬಿಟ್ಟಿದ್ದರೆ ಅದು ತಾಜಾ ಗಾಳಿ ಕುಡಿದು ಬದುಕುತ್ತಿತ್ತು ಆದರೆ ಅಲ್ಲಿ ನೆರೆದ ಜನ ಮೈಮೇಲೆ ದೆವ್ವ ಬಂದಂತೆ ಅದನ್ನು ಹೊಡೆದು ಸಾಯಿಸಿದರಂತೆ. ನಮ್ಮ ತಂದೆ ನಾಗಮಂಗಲದವರು ಸುಬ್ರಹ್ಮಣ್ಯ ಷಷ್ಠಿ ನಿಷ್ಠೆಯಿಂದ ಆಚರಿಸುತ್ತಿದ್ದವರು. ಆ ಹಾವಿನ ಸಾವಿಗೆ ಕೊನೆವರೆಗೂ ಮರಗುತ್ತಿದ್ದ'ರು. ಅದೇರೀತಿ ೫೦೧ ಬ್ರಾಂಡ್ ಸಾಬೂನನ್ನು ತುರಿದು ಬಕೆಟ್‌ನಲ್ಲಿ ದ್ರಾವಣ ಮಾಡಿ ಅದಕ್ಕೆ ಸೀಮೆ ಎಣ್ಣೆಯನ್ನು ಬೆರಸಿ ಮಿಶ್ರಣವನ್ನು ಉದುರಿ ಉದುರಿ ವಿಲವಿಲ ಸಾಯುತ್ತಿದ್ದ ಇಲಿಗಳ ಮೇಲೆ ಹಾಕಿ ಅವುಗಳ ಮೇಲಿದ್ದ ಮತ್ತು ಅದರ ಸುತ್ತ ಮುತ್ತ ಪ್ರದೇಶಕ್ಕೆ ಜಿಗಿದ ಚಿಗಟಗಳನ್ನು ಸಾಯಿಸುತ್ತಿದ್ದರು. ಅವೇ ಚಿಗಟ ಇವರ ಮೇಲೆ ಹಾರಿ ಪ್ಲೇಗು ಸೋಂಕು ಆರೋಗ್ಯ ಕಾರ್ಯಕರ್ತರಿಗೆ ತಗುಲಬಹುದಿತ್ತಲ್ಲವೆ. ಬಟ್ಟೆಯಿಂದ ಮೂಗು ಬಾಯಿ ಮುಚ್ಚಿದ್ದನ್ನು ಬಿಟ್ಟರೆ ಬೇರಾವ ಕವಚ ರಕ್ಷಣೆ ಇಲ್ಲದೆ ಮಲೆನಾಡಿನ ಮಳೆ ಸೊಳ್ಳೆ ಹಾವು ಇತ್ಯಾದಿ ಎಲ್ಲವನ್ನು ಎದುರಿಸಿ ಅಂದಿನ ಕಾರ್ಯಕರ್ತರು ಕೆಲಸ ಮಾಡಿರುವುದನ್ನು ಕೃತಜ್ಞತೆಯಿಂದ ಸ್ಮರಿಸಲೇ ಬೇಕು. ತಪ್ಪು ಮಾಡಿದರೆ ಕೊಪ್ಪಕ್ಕೆ ಹಾಕು ಎಂಬ ಗಾದೆ ಬರುವಂತೆ ಮಲೇರಿಯಾ ಸಂತ್ರಸ್ತ ಕೊಪ್ಪ ಇಂದು ಸುಂದರ ಮಲೆನಾಡು ಆಗಿದ್ದರೆ ಅದರ ಶ್ರೇಯಸ್ಸು ಯಾರೂ ಹಾಡಿ ಹೊಗಳದ ಈ ಅಜ್ಞಾತ ಯೋಧರಿಗೆ ಸಲ್ಲಬೇಕು.

ನೇರಕಾರ್ಯಾಚರಣೆ ಜೊತೆಗೆ ಜನರ ಅಂಧ ವಿಶ್ವಾಸ ಎದುರಿಸಿ ಅವರಲ್ಲಿಜಾಗೃತಿ ಮತ್ತು ಮನವೊಲಿಸುವ ಕಾರ್ಯ ಮಾಡಬೇಕಿತ್ತು. ಬೇಸಿಗೆ ಬಂತೆಂದರೆ ಪ್ಲೇಗು ಸಿಡುಬು ಪಿಡುಗುಗಳ ಕಾಟ. ತಾಯಿನಾಡು ಪತ್ರಿಕೆಯಲ್ಲಿ ನಮ್ಮ ತಂದೆ "ಬೇಸಿಗೆಯ ಭೂತಗಳು" ಎಂಬ ಲೇಖನ ಬರೆದದ್ದು ನೆನಪಿದೆ.

ಅದು ಬಹಳ ಮೂಢ ನಂಬಿಕೆ ಕಾಲ. ನಮ್ಮ ತಂದೆ ತಮ್ಮ ತಂಡದವರೊಂದಿಗೆ ಸ್ಪಿರಿಟ್ ೫ ಹಲ್ಲಿನ ಲ್ಯಾನ್ಸಲೆಟ್ ಮತ್ತು ಸಿಡುಬಿನ ಲಸಿಕೆ ಹಿಡಿದು ಮನೆ ಮನೆಗೂ ಶಾಲೆಗಳಿಗೂ ಹೋಗಿ ಲಸಿಕೆ ಹಾಕಿ ಬರುತ್ತಿದ್ದರು. ಮೊದಲು ಸ್ಪಿರಿಟ್ ದೀಪ ಹಚ್ಚಿ ಅದರ ಕಾವಿನಲ್ಲಿ ಲ್ಯಾನ್ಸಲೆಟ್ ಸ್ಟರಲೈಸ್ ಮಾಡಿ ವ್ಯಕ್ತಿಯ ಎಡಗೈ ಹಾಸಿಗೆ ಸ್ಪಿರಿಟ್ ಬಳಿದು ಎರಡು ಕಡೆ ಲಸಿಕೆ ತೊಟ್ಟು ಹಾಕಿ ಮೇಲೆ ಲ್ಯಾನ್ಸಲೆಟ್ ಐದು ಹಲ್ಲು ಚುಚ್ಚಿ ತಿರುವಿ ಗಾಯ ಮಾಡಿದೇಹಕ್ಕೆ ಲಸಿಕೆ ಸೇರಿಸುತ್ತಿದ್ದರು. ಸಿಡುಬು ಗಾಯ ಊದಿ ಆಮೇಲೆ ಮಾಯ್ದು ನಮ್ಮನ್ನು ರೋಗ ನಿರೋಧಕ ಶಕ್ತಿಯುಳ್ಳವರನ್ನಾಗಿ ಮಾಡುತ್ತಿತ್ತು. ಆದರೆ ಈ ರೀತಿ ಲಸಿಕೆ ಹಾಕುವುದೇನು ಸುಲಭದ ಮಾತಾಗಿತ್ತೇ. ಜನರಿಗೆ ಬೇವಿನ ಸೊಪ್ಪು, ಮಾರಮ್ಮನಿಗೆ ತಂಪು ಮೊಸರು ಎರೆಯುವುದರ ಮೇಲಿದ್ದ ನಂಬಿಕೆ ಆರೋಗ್ಯಕಾರ್ಯಕರ್ತರ ಮೇಲೆ ಇರುತ್ತಿರಲಿಲ್ಲ. ಸಾಮ ದಾನ ದಂಡಎಲ್ಲ ಪ್ರಯೋಗಿಸ ಬೇಕಾಗಿತ್ತು. ಒಮ್ಮೆ ಸಿಡುಬಿನ ಸೋಕು ಸೂಚನೆ ಸಿಕ್ಕಿ ಮಂಡ್ಯ ಜಿಲ್ಲೆಯಲ್ಲಿ

ಮುಂಜಾಗ್ರತಾಕ್ರಮವಾಗಿ ಊರಿನ ಎಲ್ಲ ಜನರಿಗೂ ಲಸಿಕೆ ಹಾಕ ಬೇಕಿತ್ತು. ನಮ್ಮ ತಂದೆ ಎತ್ತರದ ಆಳು ಸಮಯ ಬಂದರೆ ಪೋಲಿಸ್ ದಾಟಿ ತೋರಿ ಈ ಕೆಲಸ ಸಾಧಿಸುತ್ತಿದ್ದರು. ಆಗಿನ್ನೂ ಸರ್ಕಾರಿ ಅಧಿಕಾರಿಗಳಿಗೆ ಮರ್ಯಾದೆ ಇತ್ತು. ಊರ ಹಿರಿಯರು ಊಟ ಹಾಕಿ ಅವರ ಕೆಲಸಕ್ಕೆ ಅನುವು ಮಾಡಿಕೊಡುತ್ತಿದ್ದರು . ಈ ಪ್ರಸಂಗದಲ್ಲಿ ಒಬ್ಬಾನೊಬ್ಬ ಸುಂದರ ಕಟ್ಟಾಳು ಯುವಕ ಎಷ್ಟೇ ಒತ್ತಾಯ ಮಾಡಿದರೂ ಲಸಿಕೆ ಹಾಕಿಸಿಕೊಳ್ಳಲು ಒಪ್ಪಲಿಲ್ಲವಂತೆ. ಕಡೆಗೆ ಅವನನ್ನು ಬಿಟ್ಟು ತಂಡ ವಾಪಸಾಯಿತಂತೆ. ಮುಂದೆ ಒಂದು ತಿಂಗಳು ಬಿಟ್ಟು ಆ ಊರಿಗೆ ಹೋದಾಗ ಊರಿಗೆಊರೇ ಅವರನ್ನು ನೋಡಲು ಸೇರಿತಂತೆ. ಅಷ್ಟರಲ್ಲಿ ಒಬ್ಬ ವ್ಯಕ್ತಿ ಗೊಳೋ ಎಂದು ಅಳುತ್ತಾ ನಮ್ಮ ತಂದೆಯವರ ಬಳಿಗೆ ಬಂದು "–ಎಲ್ಲಿ ಸ್ವಾಮಿ ನಿಮ್ಮ ಪಾದಎಲ್ಲಿ ಸ್ವಾಮಿ ನಿಮ್ಮ ಪಾದ–ಎಂದು ಬಂದು ಕಾಲು ಹಿಡಿದುಕೊಂಡನಂತೆ ಸಿಡುಬಿನ ಕಲೆಯಿಂದ ಕಪ್ಪಾದ ಮುಖ. ಎರಡೂ ಕಣ್ಣುಕುರುಡು. ಅದರಿಂದ ಕಂಬನಿಯಧಾರೆ. ಅವನೇ ಅಂದು ಲಸಿಕೆ ಹಾಕಿಸಿಕೊಳ್ಳದ ಯುವಕ. ನೀವು ಅಷ್ಟು ಹೇಳಿದಿರಿ ನಾನು ಕೇಳಲಿಲ್ಲ, ನನ್ನಗತಿ ಹೇಗಾಯಿತು ನೋಡಿ ಎಂದು ಹಲುಬಿದನಂತೆ. ನಮ್ಮ ತಂದೆಯವರಿಗೂ ಕಣ್ಣು ತುಂಬಿ ಬಂದಿತ್ತು. ಆ ಊರಿನಲ್ಲಿ ಅವನೊಬ್ಬನೇ ಬಲಿಯಾದವನು. ಊರಿನವರಿಗೆ ಲಸಿಕೆಯ ಮಹತ್ವ ಕ್ರೂರವಾಗಿ ಮನವರಿಕೆಯಾಗಿತ್ತು.

ನಮ್ಮ ತಂದೆ ಕುಷ್ಟು ರೋಗವನ್ನು ಆರಂಭಘಟ್ಟದಲ್ಲೇ ಕಂಡು ಹಿಡಿಯುತ್ತಿದ್ದರು. ಅವರಿಂದ ಅದರ ಬಗ್ಗೆ ತಿಳಿದಿದ್ದ ನಾನು ಕೈ ಬೆರಳೆಲ್ಲ ಉದುರಿದ ಕುಷ್ಟರೋಗಿಯನ್ನು ಕೈ ಹಿಡಿದು ರಸ್ತೆ ದಾಟಿಸಿದ್ದೇನೆ. ಅವರೆಲ್ಲ burnt case, ಅವರಿಂದ ರೋಗ ಹರಡುವುದಿಲ್ಲ. ಸಂವೇದನಾರಹಿತ ಮಚ್ಚೆಗಳನ್ನುಳ್ಳ ರೋಗದ ಆರಂಭಘಟ್ಟದವರ ಬಾಯಿ ಮತ್ತು ಮೂಗಿನ ದ್ರವ ದಿಂದ ಅದು ಹರಡುತ್ತದೆ. ಅದೂ closer contact for longer time. ಈ ಆರಂಭದಘಟ್ಟದವರಿಗೆ ಮನವೊಲಿಸಿ ಚಿಕಿತ್ಸೆ ಮಾಡಿಸುವುದೂ ಆರೋಗ್ಯಕಾರ್ಯಕರ್ತರಿಗೆ ಸವಾಲಿನ ಕೆಲಸ.

ಹಾಗೆಂದಾಕ್ಷಣ ಎಲ್ಲ ಆರೋಗ್ಯಕಾರ್ಯಕರ್ತರೂ ಬಲು ನಿಷ್ಠೆಯವರು ಎಂದೇನಿಲ್ಲ. ಆದರೆ ಅಂತಹವರಿಂದ ಉಳಿದವರ ಹೆಸರುಕೆಡುವುದುಂಟು. ೧೯೬೪ ರ ಸುಮಾರುಚಿಕ್ಕ ಮಗಳೂರು ಮುನಿಸಿಪಾಲಿಟಿಯಲ್ಲಿ ಒಬ್ಬ ವ್ಯಾಕ್ಸಿನೇಟರ್ ಇದ್ದ. ಆತ ತನ್ನ ವರದಿ ಮತ್ತು ಸ್ಟಾಕು ಲೆಕ್ಕ ಸರಿಯಾಗಿ ಕೊಡುತ್ತಿದ್ದ. ಕಚೇರಿಯ ಎಲ್ಲರೊಡನೆ ನಗುನಗುತ್ತಾ ಸ್ನೇಹದಿಂದಿದ್ದ. ಇದ್ದಕ್ಕಿದ್ದಂತೆ ಒಬ್ಬ ಪರ ಊರಿನ ಸಂಚಾರಿ ವ್ಯಾಪಾರಿ ಬಾಡಿಗೆ ಮನೆಯಲ್ಲಿ ಸತ್ತು ಹೋದ. ನೋಡಿದರೆ ಅದು ಸಿಡುಬಿನ ಸಾವು. ಅಕ್ಕ ಪಕ್ಕದ ಮನೆಗಳಲ್ಲಿ ಜ್ವರಪೀಡಿತರು ಕಂಡರು ಮೇಲಧಿಕಾರಿಯಾಗಿ ವ್ಯಾಕ್ಸಿನೇಟರ್ ವಿಚಾರಿಸಿ ತರಾಟೆ ತೆಗೆದುಕೊಂಡಾಗ ನಮ್ಮ ತಂದೆಯ ಜಂಘಾಬಲವೇ ಹೋಗುವಂತಹ ಸುದ್ದಿ ಹೊರ ಬಂತು. ಆತ ೪ ವರ್ಷದಿಂದ ಯಾರಿಗೂ ಲಸಿಕೆ ಹಾಕಿಲ್ಲ, ಯಾರು ಯಾರದ್ದೋ ಬೋಗಸ್ ಹೆಸರನ್ನೆಲ್ಲಾ ಬರೆದು ಲಸಿಕೆ ಚರಂಡಿಗೆ ಚೆಲ್ಲಿ ಲೆಕ್ಕ ಒಪ್ಪಿಸುತ್ತಿದ್ದ. ಅವನನ್ನು ನಂಬಿದ್ದೇ ತಪ್ಪಾಗಿತ್ತು. ನಮ್ಮ ತಂದೆ ತಕ್ಷಣವೇ ಇಡೀ ನಗರದಲ್ಲಿ ಲಸಿಕೆ ಕಾರ್ಯಕ್ರಮ ಇಟ್ಟುಕೊಂಡು ಹಗಲೂ ರಾತ್ರಿ ಲಸಿಕೆ ಹಾಕಿ ನಾಲ್ಕು ದಿನಗಳಲ್ಲಿ ಊರಿಗೆಊರೇ ಸುರಕ್ಷಿತವಾಗಿತ್ತು . ನಮ್ಮ ತಂದೆಯುವರ ಬಗ್ಗೆ ಇದ್ದ ಗೌರವದಿಂದ ಪುರಸಭೆಯವರಾಗಲೀ ಪತ್ರಕರ್ತರೇ ಆಗಲಿ ಸುದ್ದಿ ಮಾಡಲೇ ಇಲ್ಲ. ನಗರದ ಜನರೆಲ್ಲ

ಸರಿರಾತ್ರಿ ಬೆಳಗಿನ ಜಾವ ಎನ್ನದೇ ಲಸಿಕೆ ಹಾಕಿಸಿಕೊಂಡರು. ದೇವರದಯದಿಂದ ಸೋಂಕಿತರೂ ಗುಣಮುಖರಾದರು. ಪ್ರಾಮಾಣಿಕರಿಗೆ ಬೆಲೆ ಸಿಗುತ್ತಿದ್ದ ಕಾಲವೊಂದಿತ್ತು ಎಂಬುದು ಮರೆಯಲಾಗದು. ಮುಖ್ಯವಾಗಿ ಕೇಂದ್ರ ಕಚೇರಿ ಸಹ ಲಸಿಕೆಯನ್ನು ಯಾವ ತೊಂದರೆ ಮಾಡದೇ ಒದಗಿಸಿತ್ತು.

ನಿವೃತ್ತಿಗೆ ಮುಂಚಿನ ವರ್ಷಗಳಲ್ಲಿ ನರ್ಸ್ ಕಾಲೇಜಿನಲ್ಲಿ ಸೋಕು ರೋಗಗಳ ಬಗ್ಗೆ ನಮ್ಮ ತಂದೆ ಪಾಠ ಮಾಡುತ್ತಿದ್ದರು.

ಇಂದು ವಿಜ್ಞಾನ ಮುಂದುವರಿದಿದೆ ಆರೋಗ್ಯ ಕಾರ್ಯಕರ್ತರಿಗೆ ಜನ ಗೌರವ ಕೊಡಬೇಕು ಸಹಕರಿಸಬೇಕು. ಗರ್ಭಿಣಿ ಹಾಗು ಎಳೆಯ ಮಕ್ಕಳಿಗೆ ಆರೋಗ್ಯ ಕಾರ್ಯಕರ್ತರು ಕಬ್ಬಿಣಾಂಶ ಮಾತ್ರೆ ಹಾಗು ವಿಟಮಿನ್ ಎ ಪುಕ್ಕಟೆ ಕೊಡಲು ಬಂದರೆ ಒಬ್ಬ ಸೆಕ್ರೆಟರೇಟ್ ಅಧಿಕಾರಿಯ ಪತ್ನಿ ಬೈದು ಕಳಿಸಿದ್ದನ್ನು ನಾನು ನೋಡಿದ್ದೇನೆ. ಪ್ರಮುಖ ಆಸ್ಪತ್ರೆ (ಸರ್ಕಾರಿ –ಖಾಸಗಿ)ಗಳಲ್ಲಿ ಆರೋಗ್ಯ ಕಾರ್ಯಕರ್ತರ ಸೇವೆಗೆ ಗೌರವಕೊಡುವುದನ್ನು ಕಲಿಸಬೇಕು. ಮೈಕ್ರೋಬಯಾಲಜಿ ಪದವೀಧರರಿಗೆ ಜನರಲ್ ಹೆಲ್ತ್ ವಿಭಾಗದ ವೈದ್ಯರಾಗಲು ಪ್ರೋತ್ಸಾಹ ನೀಡಬೇಕು.

■



ಕೃಪೆ: ಡೌನ್ ಟು ಅರ್ತ್

● ದಂನಳ

- 2020ಕ್ಕೆ ವೈರಸ್ ಕಾಟವೆ? 2020ನ್ನು ಅನ್ ಇನ್‌ಸ್ಟಾಲ್ ಮಾಡಿ ನಂತರ ರಿ ಇನ್‌ಸ್ಟಾಲ್ ಮಾಡಿದರೆ ವೈರಸ್ ಕಾಟದಿಂದ ಹೊರಬರಬಹುದೇನೋ..
- ಮನೆಯಿಂದ ಹೊರಟರಾ: ಆನ್ ಯುವರ್ ಮಾಸ್ಕ್, ಗೆಟ್ ಸೆಟ್ ಗೊ...
- ಮನೇಲೇ ಇರುವ ಅನೇಕ ಸರ್ಕಾರಿ ನೌಕರರಿಗೆ ವ್ಯತ್ಯಾಸವೇ ಗೊತ್ತಾಗುತ್ತಿಲ್ಲವಂತೆ.
- ಈಗ ವಾರಾಂತ್ಯ ಅಂದರೆ ಶನಿವಾರ ಮತ್ತು ಭಾನುವಾರ ಅಲ್ಲ, ಸೋಮವಾರ, ಮಂಗಳವಾರ, ಬುಧವಾರ, ಗುರುವಾರ ಮತ್ತು ಶುಕ್ರವಾರ ಸಹ ಸೇರಿದೆ.
- 'ಇದೆಲ್ಲಾ ಮುಗಿದ ಮೇಲೆ ನಾನು ಒಂದು ವಾರ ರಜೆ ಹಾಕಿ ಆಫೀಸಿನಲ್ಲೇ ಇರುತ್ತೇನೆ' ಎಂದು ಅನೇಕರು ನಿರ್ಧರಿಸಿದ್ದಾರೆ.
- ಈಗ ಮಾಸ್ಕ್ ಬೆಳ್ಳಿ, ಡಿಸ್ಟನ್ಸ್ ಬಂಗಾರ.
- ನ್ಯೂಟನ್ನನ 3ನೆಯ ನಿಯಮ: ಒಂದು ಶರೀರ ಒಂದೇ ಕಡೆ ಇರುತ್ತದೆ ಹೆಂಡತಿ ಅದನ್ನು ಗಮನಿಸಿ ಒಂದು ಕೆಲಸ ಹಚ್ಚುವವರೆಗೆ.
- ಯಾಕೆ ತಡ? ಟ್ರಾಫಿಕ್ ಸರ್. ಆದರೆ ಇದು ಆನ್ ಲೈನ್ ಕ್ಲಾಸ್. ಅದೇ ಸರ್, ನೆಟ್ ವರ್ಕ್ ಟ್ರಾಫಿಕ್.
- ಕ್ವಾರಂಟೈನ್ ಎಂದು ಸರಿಯಾಗಿ ಉಚ್ಚರಿಸಿ ಹೇಳಲು ಕಷ್ಟಪಡುತ್ತಿರುವಾಗ ಈಗ ಹೈಡ್ರಾಕ್ಸಿಕ್ಲೋರೊಕ್ವಿನೈನ್ ಎಂದು ಹೇಳಲು ಕಲಿಯಬೇಕಿದೆ!
- ನನಗೆ ಈ ನನ್ನ ಅಮ್ಮನ ಮೊಮ್ಮಕ್ಕಳನ್ನು ನೋಡಿಕೊಂಡು ಸುಸ್ತಾಗಿದೆ. ಬಂದು ನನ್ನನ್ನು ಬಿಡುಗಡೆ ಮಾಡುವಂತೆ ಯಾರಾದರೂ ಅವರಿಗೆ ಹೇಳುವಿರಾ ಪ್ಲೀಸ್?
- ಫೇಸ್‌ಬುಕ್‌ನಲ್ಲಿ ಪ್ರಶ್ನೆ: ಇಂದು ನಾನು ಮನೆಯಲ್ಲಿ ಯಾವ ಡ್ರೆಸ್ ಹಾಕಿಕೊಳ್ಳಲಿ?
- ಇಫ್ ಯು ಸ್ಟೆ ಪಾಸಿಟಿವ್ ಇನ್ ಎ ನೆಗಟಿವ್ ಸಿಚುಯೇಷನ್ ಯು ವಿನ್.
- ಸ್ಟಾಂಡ್ ಟುಗೆದರ್ ಬೈ ನಾಟ್ ಸ್ಟಾಂಡಿಂಗ್ ಟುಗೆದರ್.
- ನಾಯಿ ತನ್ನ ಒಡೆಯನನ್ನೇ ನೋಡುತ್ತಾ 'ಇವನು ಯಾಕೆ ಮನೇಲೇ ಇರ್ತಾನೆ ಈಗೀಗ?'
- ಈಗ ಎ.ಸಿ. ಬಿ.ಸಿ. ಎಂದರೆ ಆಫ್ಟರ್ ಕ್ರೈಸ್ತ್, ಬಿಫೋರ್ ಕ್ರೈಸ್ತ್ ಅಲ್ಲ. ಆಫ್ಟರ್ ಕರೋನ ಬಿಫೋರ್ ಕರೋನ.
- 2020 ಶುರುವಾದಾಗ 'ಹ್ಯಾಪಿ ನ್ಯೂ ಈಯರ್' ಎಂದು

  ಸಂಭ್ರಮದಿಂದ ಹೇಳಿದ್ದು ನೆನಪಿದೆಯೆ? ಆದರೆ ಈಗ...? ■

ಇಂದು ಕೊರೊನಾ, ಅಂದು ಏಷ್ಯನ್ ಫ್ಲೂ

● ಸಿ.ಆರ್.ಸತ್ಯ

ಆಧುನಿಕ ಯುಗದಲ್ಲಿದ್ದೇವೆ, ವೈಜ್ಞಾನಿಕ, ವೈದ್ಯಕೀಯ, ತಾಂತ್ರಿಕ ಪ್ರಗತಿಯುಳ್ಳ ನಮ್ಮ ಇಂದಿನ ಪ್ರಪಂಚಕ್ಕೆ ಏನು ಕಷ್ಟ ತಾನೇ ಒದಗೀತು ಎಂಬ ಭ್ರಮೆಯಲ್ಲಿದ್ದ ನಮ್ಮನ್ನು, ಕೊರೊನಾ ಸೋಂಕು ಇಂದು ಊಹಿಸಲಾರದ ಅಧೋಗತಿಗೆ ತಂದಿಳಿಸಿದೆ! ಹೀಗಿದ್ದರೆ ಇಂದಿಗೆ ಒಂದು ಶತಮಾನದ ಹಿಂದೆ ಯೂರೋಪ್, ಏಷ್ಯ ಖಂಡವನ್ನು ತತ್ತರಿಸಿ ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡ ಏಷ್ಯನ್ ಫ್ಲೂನ ಪರಿಣಾಮ, ಭಾರತದಂತಹ ಇನ್ನೂ ಮುಂದುವರೆದಿಲ್ಲದಿದ್ದ ದೇಶದಲ್ಲಿ ಹೇಗಿದ್ದಿರಬಹುದು? ಅದರಲ್ಲೂ ಅಂದಿನ ನಮ್ಮ ಮೈಸೂರು ರಾಜ್ಯದಲ್ಲಿ?

ಈ ಪ್ರಶ್ನೆಗೆ ನನ್ನ ಮನಸ್ಸಿನಲ್ಲಿ ನನ್ನ ತಾತನವರ (ತಂದೆಯವರ ತಂದೆ) ನೆನಪು ಮರುಕಳಿಸಿತು, ನನ್ನ ಹೃದಯವು ಕಂಪಿಸಿತು.

ಅವರ ಬಗ್ಗೆ ಹೇಳುವುದಕ್ಕೆ ಮುಂಚೆ ಒಂದು ಮಾತು; ಇಂದು ನಾವು ಕಂಡು ಮೆಚ್ಚುತ್ತಿರುವ ಸರಕಾರದ ನಿಯಂತ್ರಣ ಪದ್ಧತಿಗಳು, ಸಾವಿರಾರು ವೈದ್ಯರ ಹಾಗೂ ಸಹಾಯಕ ಸಿಬ್ಬಂದಿಗಳ, ಪೌರ ಕಾರ್ಮಿಕರ, ಪೋಲಿಸರ ಮತ್ತು ಸಾಧಾರಣ ಜನರ ನಿಸ್ವಾರ್ಥ ಸೇವೆ–ಇವೆಲ್ಲವೂ ಆಗಲೂ ಇತ್ತು. ಹೌದು, ಆದರೆ ಅದು ಅಂದಿನ ಪರಿಸ್ಥಿತಿಗೆ ಅನುಗುಣವಾಗಿತ್ತು. ಮಾನವೀಯತೆಯೂ ಇತ್ತು. ಮಾನವೀಯತೆ ಎಂಬುದು ಒಂದು ಅಳಿಸಿ ಹೋಗಲಾರದ ನಮ್ಮಲ್ಲಿನ ಒಳ ಶಕ್ತಿ. ಅದು ಎಂದೂ ಮಾಸುವುದಿಲ್ಲ!

೧೯೦೦ ಇಸವಿಯಿಂದ ನನ್ನ ತಾತ, ಕಪ್ಪಣ್ಣ, ಹೆಗ್ಗಡದೇವನ ಕೋಟೆ ತಾಲೂಕಿನ ಹಂಪಾಪುರದಲ್ಲಿ ಸ್ಯಾನಿಟೆರಿ ಇನ್ಸ್ ಪೆಕ್ಟರ್ ಆಗಿ ಮೈಸೂರು ರಾಜ್ಯದ ಸಾರ್ವಜನಿಕ ವೈದ್ಯಕೀಯ ವಿಭಾಗದಲ್ಲಿ ಕೆಲಸಕ್ಕಿದ್ದರು. ಅದಕ್ಕೂ ೫೦ ವರುಷಗಳ ಹಿಂದಿನಿಂದಲೇ ಬ್ರಿಟಿಷ್ ಆಡಳಿತದಲ್ಲಿ ಈ ವಿಭಾಗದ ಕಾರ್ಯ ನಿರ್ವಹಣೆ ಬಹು ದಕ್ಷತೆಯಿಂದ ನಿರ್ವಹಿಸಿದ್ದು, ೧೮೯೭ ರಲ್ಲಿ ನಮ್ಮ ದೇಶಕ್ಕೆ ಪ್ಲೇಗ್ ಮಾರಿ ಸೋಕಿದಾಗ, ರಾಜ್ಯವು ಎಪಿಡೆಮಿಕ್ ಡಿಸೀಸ್ ರೆಗ್ಯುಲೇಷನ್ ಆಕ್ಟ್ ಎಂಬ ಶಾಸನವನ್ನು ಜಾರಿಗೊಳಿಸಿ ಸರಕಾರಕ್ಕೂ ಎಲ್ಲಾ ಸ್ಯಾನಿಟೆರಿ ಉಪಭಾಗಗಳಿಗೂ ಅವಶ್ಯವುಳ್ಳ ಅಧಿಕಾರವನ್ನೂ ಕೊಟ್ಟಿತ್ತು.

ಅಂದಿನ ೮ ಡಿಸ್ಟ್ರಿಕ್ಟ್ ಗಳಲ್ಲಿ ವೈದ್ಯಕೀಯ ವಿಭಾಗದ ಮುಖ್ಯಸ್ಥರಾಗಿ ಸ್ಯಾನಿಟೆರಿ ಆಫೀಸರ್ ಮತ್ತು ಅವರ ಕೆಳಗೆ ಸ್ಯಾನಿಟೆರಿ ಇನ್ಸ್ ಪೆಕ್ಟರ್–ಹೀಗೆ, ನಾಡಿನ ಆರೋಗ್ಯದ ಹಿತರಕ್ಷಣೆಗೆ ಸಜ್ಜಾಗಿದ್ದರು. ತಾಲೂಖಿನ ಮೂಲೆ ಮೂಲೆಗೂ ಹೋಗಿ, ಸ್ವಚ್ಛತೆಯನ್ನು ಪರೀಕ್ಷಿಸಿ, ಬೇಕಿದ್ದ ಕ್ರಮಗಳನ್ನು ಕೈಗೊಂಡು, ಜನರಿಗೆ ಆರೋಗ್ಯದ ಬಗ್ಗೆ ಎಚ್ಚರಿಕೆ ಕೊಡುವುದು, ಸಲಹೆಗಳನ್ನು ನೀಡುವುದೇ ಕಪ್ಪಣ್ಣನವರ ಜವಾಬ್ದಾರಿಯಾಗಿತ್ತು. ಇದಕ್ಕೆ, ಸಹಾಯಕವಾಗಿ ಅವರಿಗೆ ಒಂದು ಕುದುರೆಯೂ ಇಬ್ಬರು ಪರಿಚಾರಕರೂ

ನೇಮಕವಾಗಿದ್ದರು.

೧೯೧೮ ರಲ್ಲಿ ಪರೋಕ್ಷವಾಗಿ, ಮೈಸೂರು ರಾಜ್ಯ (ಹಂಪಾಪುರವೂ ಸೇರಿ) ಮೊದಲನೆಯ ಮಹಾಯುದ್ಧದ ಆಘಾತದಿಂದ ಹೊರಬರುತ್ತಿದ್ದಂತೆಯೇ, ನಮ್ಮ ದೇಶಕ್ಕೆ ಇನ್ ಫ್ಲುಎನ್ ಝಾ ಸೋಂಕು ತಟ್ಟಿತು. ಪ್ರಪಂಚಾದ್ಯಂತ, ಈ ಸೋಂಕಿಗೆ ೭ ಕೋಟಿ ಜನರಷ್ಟನ್ನು ಆಹುತಿ ತೆಗೆದುಕೊಳ್ಳುವುದರಲ್ಲಿತ್ತು. ಭಾರತದಲ್ಲಿ, ಮುನ್ಸೂಚನೆಯೇ ಇಲ್ಲದೆ ಹರಡಿದ ಈ ಖಾಯಿಲೆಗೆ, ಸಾವಿರಾರು ಜನರು ದೇಶಾದ್ಯಂತ, ನಮ್ಮ ರಾಜ್ಯದಲ್ಲೂ ಸೇರಿ, ಬಲಿಯಾದರು. ಮೈಸೂರು ಮಹಾರಾಜರಿಗೂ ಈ ಸೋಂಕು ತಟ್ಟಿ, ಹೇಗೋ ಜೀವನೋಪಾಯದಿಂದ ಪಾರಾದರು! ನಮ್ಮ ರಾಜ್ಯದಲ್ಲೇ ಜೂನ್–ಅಕ್ಟೋಬರ್ ೧೯೧೮ ರ ಅವಧಿಯಲ್ಲಿ ೨ ಲಕ್ಷ ಜನರು ಪ್ರಾಣಬಿಟ್ಟರು. ನಮ್ಮಲ್ಲಿಯ ಅನೇಕ ಡಾಕ್ಟರ್ ಗಳ, ನರ್ಸ್ ಗಳ, ಯೋಧರ ಸೇವೆ ಬ್ರಿಟಿಷ್ ಸರಕಾರಕ್ಕೆ ಯುದ್ಧ ಭೂಮಿಯಲ್ಲಿ ಸೀಮಿತವಾಗಿದ್ದು, ಮೈಸೂರು ರಾಜ್ಯದಲ್ಲಿ ಒಬ್ಬ ಡಾಕ್ಟರ್ ಗೆ ೩೨, ೮೦೦ ಜನರ ಯೋಗಕ್ಷೇಮದ ಜವಾಬ್ದಾರಿ ಇತ್ತು!

ಆಗಿದ್ದ ಔಷಧಿ? ರವೆ ಗಂಜಿ–ಜೊತೆಗೆ ದಕ್ಕಿದರೆ ಮಾತ್ರ– "ತೈಮಾಲ್" ಎಂಬ ಮಾತ್ರೆ, ಅಷ್ಟೇ! ಈ ಮಾತ್ರೆಯಾಗಲೀ, ಇತರ ಸಹಾಯ ಸೌಕರ್ಯಗಳಾಗಲೀ , ಎಲ್ಲೆಡೆ ಜನರನ್ನು ತಲುಪಲು, ಸಾರಿಗೆ ವ್ಯವಸ್ಥೆ, ಸಂಪರ್ಕ ವ್ಯವಸ್ಥೆ ಆಗ ಎಲ್ಲಿದ್ದವು ತಾನೆ? ಸ್ವಯಂ ಸೇವಕರು ಮನೆ ಮನೆಗೆ ಹೋಗಿ ರೋಗಿಗಳನ್ನು ಹೊರತಂದು, ತಾತ್ಕಾಲಿಕವಾಗಿ ನಿರ್ಮಿಸಿದ್ದ ಡೇರೆಗಳಲ್ಲಿ ಮಲಗಿಸಿ ಶುಶ್ರೂಷೆಗೆ ಇಳಿದರು. ಜಾತಿ, ಬೇಧವಿಲ್ಲದೆ ಎಲ್ಲರಿಗೂ ಸಹಾಯಹಸ್ತ ನೀಡುತ್ತಿದ್ದರು. ಆ ಸಮಯಕ್ಕೆ ಬಾಂಬೇ, ಮದರಾಸು ಕಡೆಯಿಂದ ಫ್ಲೂ ಸೋಂಕು ಎರಡು ಬಾರಿ ಸುನಾಮಿ ಅಲೆಗಳಂತೆ ರಾಜ್ಯಕ್ಕೆ ಬಡಿಯಿತು.. ಆಗ, ಕೆಲವೊಮ್ಮೆ ರೋಗ ಪೀಡಿತರು ತಮ್ಮ ಜಾತಿ ಕುಲದ ಆಧಾರದ ಮೇಲೆ ಬೇರೆಯಾದ ಸ್ಥಳದಲ್ಲಿರಿಸಿ, ಬೇರೆ ಆಹಾರ ಕೊಡಿ ಎಂದು ಸಮರಕ್ಕೆ ಇಳಿದರಂತೆ.

ಅಂದು ದಿವಾನ್‌ರಾಗಿದ್ದ ಸರ್. ಎಮ್. ವಿಶ್ವೇಶ್ವರಯ್ಯನವರ ಅಧಿಕಾರಾವಧಿಯ ಕೊನೆಯ ವರುಷವಾಗಿತ್ತು. ಬೆಂಗಳೂರಿನಲ್ಲೂ, ಮೈಸೂರಿನಲ್ಲೂ ಮತ್ತೆಲ್ಲಾ ಡಿಸ್ಟ್ರಿಕ್ಟ್ ಗಳಲ್ಲೂ ಸರಕಾರದ ಎಲ್ಲಾ ವಿಭಾಗಗಳು ಎಚ್ಚೆತ್ತುಕೊಂಡವು. ಇವತ್ತಿನ ಕೊರೊನಾ ತಂದ ಪರಿಸ್ಥಿತಿಯೇ ಆಗಲೂ ಬಂತು; ನೂರಾರು ಸರಕಾರಿ ಡಾಕ್ಟರ್ ಗಳು, ಖಾಸಗಿ ಡಾಕ್ಟರ್ ಗಳು, ಆಗ ಅವರಿಗಿದ್ದ ಮೂಲ ಸೌಕರ್ಯಗಳಿಂದಲೇ ಹೇಗೋ ನಿಭಾಯಿಸುತ್ತಾ, ಹಗಲು ರಾತ್ರಿ ಸೇವೆಗಿಳಿದರು. ಸ್ಥಳೀಯ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮಲಗಲೂ ಜಾಗವಿಲ್ಲದೆ ಅವರನ್ನು ಹೊರಗಿಡಬೇಕಾಯಿತು. ತೀರಿಹೋದ ರೋಗಿಗಳಿಗೆ ಸುಸಮಯಕ್ಕೆ ಶವ ಸಂಸ್ಕಾರ ಮಾಡುವುದೇ ಅಸಾಧ್ಯವಾಯಿತು! ಇಂತಹ ಸನ್ನಿವೇಶದಲ್ಲಿ ನಮ್ಮ ತಾತನವರ ಪರಿಸ್ಥಿತಿ ಹೇಗಿತ್ತೆಂಬುದನ್ನು ನಮ್ಮ ತಂದೆಯವರು ಜ್ಞಾಪಿಸಿಕೊಳ್ಳುತ್ತಿದ್ದರು.

ಟೆಲಿಫೋನ್, ಅಂಚೆ ಸಂಪರ್ಕ ಇಲ್ಲದ ಆ ಸಮಯದಲ್ಲಿ (ಅದೂ ಹಂಪಾಪುರದಂತಹ ಆ ಚಿಕ್ಕ ಊರಿನಿಂದ ಅವರು ಕೆಲಸದ ಮೇಲೆ ಹೊರ ಹೊರಟರೆಂದರೆ, ಎಲ್ಲಿಗೆ ಹೋಗುತ್ತಿದ್ದರು, ಎಂದು ಮರಳಿ ಬರುವರು ಎಂಬುದು ಮನೆಯವರಿಗ್ಯಾರಿಗೂ ಊಹಿಸಲಸಾಧ್ಯವಾಗಿತ್ತು. ಅವರ ಸಂಸಾರದ ಹೊಣೆ ಅಸಹಾಯಕರಾಗಿದ್ದ ನಮ್ಮ ಅಜ್ಜಿಯವರದ್ದಾಗಿತ್ತು. ದಿನಕ್ಕೆ ಎಷ್ಟೋ ಮೈಲುಗಳ ದೂರದಲ್ಲಿ

ಇರುತ್ತಿದ್ದ ಹಳ್ಳಿಗಳನ್ನು ತಲುಪಿ, ಅಲ್ಲಿಯ ಮೂಲ ಸೌಕರ್ಯಗಳನ್ನು ಪರೀಕ್ಷಿಸಿ, ಅವಶ್ಯವುಳ್ಳ ಸಹಾಯವನ್ನು ಕೊಟ್ಟು, ಹಾಗೆಯೇ ಔಷದಿ ಮಾತ್ರೆಗಳನ್ನೂ ವಿತರಣೆ ಮಾಡಿ, ಮುಂದಿನ ಹಳ್ಳಿಗೆ ಹೊರಡುತ್ತಿದ್ದರು. ಊಟ , ತಿಂಡಿ, ವಿಶ್ರಾಂತಿ ಇಲ್ಲದೆ ಅವರು ಮಲಗುತ್ತಿದ್ದುದು ಅವರು ಪರಿಚಾರಕರು ರಾತ್ರಿಯಲ್ಲಿ ಕಟ್ಟಿ ನಿಲ್ಲಿಸುತ್ತಿದ್ದ ಡೇರೆಗಳಲ್ಲೇ!

೧೮೯೯ ರ ಸುಮಾರಿಗೆ ಜನರಿಗೆ ಫ್ಲೂ ಸೋಂಕು ತಟ್ಟುವುದು ಕಮ್ಮಿಯಾಗಿ ಕಂಡು ಬಂದರೂ, ಅದರಿಂದಾಗಿ ಮರಣಹೊಂದುತ್ತಿರುವವರ ಸಂಖ್ಯೆ ಅಷ್ಟಾಗಿ ಇಳಿಮುಖವಾಗಲೇ ಇಲ್ಲ. ಕಪ್ಪಣ್ಣ ನವರಿಗೆ ಜವಾಬ್ದಾರಿ ಇನ್ನಷ್ಟು ಹೆಚ್ಚಿತು.

ಆಗ ನಮ್ಮ ತಂದೆಯವರಿಗೆ ಸುಮಾರು ಹತ್ತು ವರುಷ ವಯಸ್ಸು. ಆ ಒಂದು ದಿನ ಕಪ್ಪಣ್ಣ ನವರು ಯಾಕೋ ಬಹು ದಿನಗಳಿಂದ ಮನೆಗೆ ಬಂದಿಲ್ಲ, ಎಲ್ಲಿ ಹೇಗಿದ್ದಾರೋ ಎಂಬ ಆತಂಕದಲ್ಲಿ ಮನೆಯವರೆಲ್ಲಾ ಕಾಯುತ್ತಿದ್ದರು. ಯಾರೋ ಒಬ್ಬರು ಮನೆಗೆ ಬಂದು ಸ್ವಲ್ಪ ಹೊರಗೆ ಬನ್ನಿ ಎಂದು ಕರೆದರು. ನಮ್ಮ ತಂದೆ , ಅಜ್ಜಿ ಎಲ್ಲರೂ ಹೊರಗೆ ಬಂದು ರಸ್ತೆಯಾಚೆಗೆ ಕಣ್ಣು ಹಾಯಿಸಿದರು.

ದೂರದಲ್ಲಿ ಕಪ್ಪಣ್ಣನವರ ಪರಿಚಾರಕರು ಕುದುರೆಯ ಮೇಲೆ ಕಪ್ಪಣ್ಣನವರನ್ನು ಮಲಗಿಸಿಕೊಂಡು ಇವರ ಮನೆಯ ಕಡೆ ಶೋಕಗ್ರಸ್ತರಾಗಿ ಕರೆದುಕೊಂಡು ಬಂದರು. ಜ್ವರದಿಂದ ಅವರ ದೇಹ ಕೆಂಡದಂತೆ ಸುಡುತ್ತಿತ್ತು. ಗಾಬರಿಯಿಂದ ಅವರನ್ನು ಮನೆಯೊಳಗೆ ಎತ್ತಿಕೊಂಡು ಬಂದು ಹಾಸಿಗೆಯಲ್ಲಿ ಮಲಗಿಸಿದರು. ನಮ್ಮ ಅಜ್ಜಿ ಅಯ್ಯೋ, ಅವರಿಗೂ ಆ ಮಾತ್ರೆ ಕೊಡಿ ಅಂತ ಕೂಗಿದರಂತೆ. ಆದರೆ ಅವತ್ತಿನ ದಿನ ನೂರಾರು ಆ 'ತೈಮಾಲ್' ಮಾತ್ರೆಗಳನ್ನು ಹಳ್ಳಿ ಹಳ್ಳಿ ಯಲ್ಲಿ ವಿತರಣೆ ಮಾಡಿದ್ದ ಕಪ್ಪಣ್ಣ ನವರ ಬಳಿ ಒಂದು ಮಾತ್ರೆಯೂ ಇರಲಿಲ್ಲ. ಸಾರಿಗೆ ವ್ಯವಸ್ಥೆ ಇಲ್ಲದೆ ಹಂಪಾಪುರದ ಆಸ್ಪತ್ರೆಗೂ ಮಾತ್ರೆಗಳು, ಇತರ ಔಷಧಿಗಳು ಬಂದೇ ಇರಲಿಲ್ಲ. ನೋಡುತ್ತಿದ್ದಂತೆಯೇ, ಇತರರಿಗೆ ಸಂಜೀವಿನಿ ಹಾಗೆ ಮಾತ್ರೆಗಳನ್ನು ದೊರಕಿಸಿದ್ದ ಕಪ್ಪಣ್ಣನವರು ತಮಗೇ ಇಲ್ಲದ ಪರಿಸ್ಥಿತಿಯಿಂದ ಪ್ರಾಣ ಬಿಟ್ಟರು!

ತಾತನವರು ತೀರಿಹೋದ ಮನೆಯ ಪಕ್ಕದಲ್ಲೇ , ಇವತ್ತಿಗೂ ನೂರು ವರುಷಗಳ ಹಿಂದೆಯೇ ಸ್ಥಾಪಿಸಿದ ಅವರ ಕಛೇರಿಯಿದ್ದ ಹಂಪಾಪುರದ ಆಸ್ಪತ್ರೆ ಇನ್ನೂ ಸೇವೆಯಲ್ಲಿದೆ. ಬಹುಶ: ಇವತ್ತಿನ ಕೊರೊನಾ ರೋಗಿಗಳಿಗೂ ಸಜ್ಜಾಗಿದೆ ಎನ್ನಬಹುದೇನೋ!

ಆಗಲೇ ಹೇಳಿದ ಹಾಗೆ ಇದು ನೂರು ವರುಷದ ಹಿಂದಿನ ಮಾತಾಯಿತು. ಇವತ್ತಿನ ಕೊರೊನಾ ಸ್ಥಿತಿಯಲ್ಲಿ ನಮ್ಮ ಪೀಳಿಗೆಗೂ ಅದೇ ಭಯಂಕರ ಅಸಹಾಯಕರ ಸನ್ನಿವೇಶವಿದೆ ಎಂದು ಅನ್ನಿಸುವುದಿಲ್ಲವೇ? ಏನಿಲ್ಲದಿದ್ದರೂ ಸರಿ, ನಮ್ಮಲ್ಲಿ ಇನ್ನೂ ಮಾನವೀಯತೆ ಇದೆ, ಧೈರ್ಯವಿದೆ, ಸ್ಥೈರ್ಯವಿದೆ. ಅನೇಕ ಸಜ್ಜನರಿಂದ ಜೀವ ತ್ಯಾಗವೂ ನಮಗಾಗಿ ಅಗುತ್ತಿದೆ.. ಹಾಗಾಗಿ, ಈ ಕಳಂಕವನ್ನು ಎದುರಿಸಿ ಮೇಲೆದ್ದು ಬರುತ್ತೀವಿ ಎಂದು ನನ್ನ ಅನಿಸಿಕೆ. ಏನನ್ನುತ್ತೀರಿ?

■

ಕಪಿನೀಪತಿಯೂ ಕೊರೋನ ವೈರಸ್ಸೂ

● **ಬೇಲೂರು ರಾಮಮೂರ್ತಿ**

ಕಪಿನೀಪತಿ ಬಹಳ ದೊಡ್ಡ ಲಾಯರು. ಮನೆಯಲ್ಲೂ ಆಫೀಸು, ಹೊರಗಡೆಯೂ ಆಫೀಸು, ಕೋರ್ಟು ಹೀಗೆ ಸದಾ ಶಿಷ್ಯ ಲಾಯರುಗಳಿಂದ, ಕಕ್ಷಿಗಾರರಿಂದ ಸುತ್ತುವರಿಯಲ್ಪಟ್ಟಿದ್ದರು. ಯಾವಾಗ ಕೊರೋನ ಅಟ್ಯಾಕ್ ಆಯಿತೋ ಆಗ ಎಲ್ಲರೂ ಖಾಲಿ. ಮನೆಯ ಆಫೀಸು ತೆಗೆದು ಕೂತರೂ ಕಕ್ಷಿಗಾರರು ಬರಬೇಕಲ್ಲ. ಮನೆಕೆಲಸದವಳು ಬರೋಲ್ಲ. ಅಮ್ಮಾವರು ಪೇಪರ್ ಬೇಡ ಅಂದುಬಿಟ್ಟಿದ್ದಾರೆ. ಅಕ್ಕಪಕ್ಕದ ಮನೆಯವರ ಜೊತೆ ಮಾತಾಡುವಂತಿಲ್ಲ (ಯಾಕೆಂದರೆ ಮೊದಲೂ ಮಾತಾಡ್ತಿರಲಿಲ್ಲ). ಇನ್ನು ಹೆಂಡ್ತಿ ಹತ್ತಿರ ಮಾತು ಅಂತೇನಿಲ್ಲ. ಎಲ್ಲ ಬೈಗುಳವೇ. ಲೇ ತಗೊಂಡ್ಬಾರೇ, ಲೇ ಎಲ್ ಹೋದ್ಯೇ, ಲೇ ಕಿವಿ ಕೇಳ್ತಾ, ಇದೇನು ಸುಡುಗಾಡು ಮಾಡಿದೀಯ, ಹೀಗೆ.

ಪ್ರಧಾನಮಂತ್ರಿಗಳು ಲಾಕ್‌ಡೌನ್ ಹೇಳಿದ ನಂತರ ಒಂದು ದಿನ ಅಡಿಗೆ ಮನೆಯಲ್ಲಿದ್ದ ಹೆಂಡತಿಯ ಬಳಿ ಹೋದಾಗ ಅವಳು ನಾಲ್ಕು ಅಡಿ ದೂರದಿಂದ ಮಾತಾಡಿ ಅಂದಳು. ಕಪಿನೀಪತಿ ನಕ್ಕು ಅದು ಗಂಡ ಹೆಂಡ್ತಿಗೆ ಅನ್ವಯಿಸೋಲ್ಲ ಕಣೆ ಅಂದರು. ಇವತ್ತು ಏನು ತಿಂಡಿ ಮಾಡ್ತೀಯ ಅಂದರು. ನಾನು ಕಾಯಿ ತುರ್ಕೊಡ್ಲಾ ಅಂತ ಕೇಳಿದರು. ನೀನು ತಿಂಡಿ ಮಾಡೋ ಹೊತ್ತಿಗೆ ನಾನು ಅಂಗಳ ಗುಡಿಸಿ ಬರ್ತೀನಿ ಅಂದರು. ದಿನ ಕಳೆದಂತೆ ಸಮಯ ಕಳೆಯೋದೇ ಕಷ್ಟವಾಯಿತು. ದೇವರ ಮನೆ ಕಡೆ ನೋಡಿದರು. ನಾನು ಒಳಗೆ ಹೋಗಿ ಎಷ್ಟು ದಿವಸ ಆಯಿತು ಅಂದುಕೊಂಡು ಅವತ್ತು ಸ್ನಾನ ಆದ ಮೇಲೆ ದೇವರ ಮನೆಗೆ ಹೋಗಿ ಮೊದಲು ಎಲ್ಲಾ ಸ್ವಚ್ಛಗೊಳಿಸಿ ನಂತರ ಅಂಗಳದ ಗಿಡಗಳಿಂದ ಹೂವು ಕಿತ್ತು ತಂದಿದ್ದನ್ನು ದೇವರ ಫೋಟೋಗಳಿಗೆ ಇಟ್ಟು ನಮಸ್ಕರಿಸಿದರು. ಹೆಂಡತಿ ಮುಸಿಮುಸಿ ನಗುತ್ತಾ ಅಮ್ಮನಿಗೆ ವಿಡಿಯೋ ಕಾಲ್ ಮಾಡಿ ನಿನ್ನ ಅಳಿಯನ ಅವತಾರ ನೋಡು ಅಂದಳು.

ಸಂಜೆ ಇದ್ದಕ್ಕಿದ್ದಂತೆ ಮಹಡಿ ಮೇಲೆ ಹೋಗಿ ಬೆಡ್ ರೂಮಿನ ವಾರ್ಡ್‌ರೋಬ್ ಒಳಗೆ ಹುಡುಕುತ್ತಿದ್ದರು. ಹೆಂಡತಿ ಬಂದು ಏನು ಹುಡುಕ್ತಿದೀರ ಅಂತ ಕೇಳಿದರೆ ಶ್ ಅಂದರು. ಅರ್ಧ ಗಂಟೆ ಹುಡುಕಿದ ಮೇಲೆ ಸಿಕ್ಕಿತು ಅಂದು ಪಗಡೆ ಹಾಸನ್ನೂ ಕಾಯಿಗಳನ್ನೂ ತಂದು ಈ ಆಟ ನಿನಗೆ ನೆನಪಿದೆಯೋ ಮರೆತುಹೋಗಿದೆಯೋ ಅಂತ ಕೇಳಿದರು. ನಿಮ್ಮನ್ನು ಬೇಕಾದರೂ ಮರೀತೀನಿ ಆದರೆ ಪಗಡೆ ಹಾಸನ್ನಲ್ಲ ಅಂದರು ಹೆಂಡತಿ. ಸಂಜೆ ಹೊತ್ತಿಗೆ ಗಂಡ ಹೆಂಡತಿ ಇಬ್ಬರೂ ಬಾಲ್ಕನಿಯಲ್ಲಿ ಕೂತು ಬೋಳು ಬೀದಿಯನ್ನು ನೋಡಿಕೊಂಡು ಪಗಡೆ ಆಡಿದರು.

ಆಗ ಅವರ ಮೊಬೈಲ್ ಗಂಟೆ ಬಾರಿಸಿತು. ಸ್ಪೀಕರ್ ಆನ್ ಆಗಿತ್ತು. ಮಾತು ಕೇಳಿಬರುತ್ತಿತ್ತು. ಬುದ್ದಿ ನಾನು ಬಸವಾಚಾರಿ ಮಾತಡ್ತಿದೀನಿ. ಒಂದ್ಸಾರಿ ನನ್ನ ಅತ್ತೆ ಕೇಸ್ ನಿಮ್ಮತ್ರ ತಗೊಂಡುಬಂದಿದ್ದೆ. ಅತ್ತೆ ಸತ್ತಳು. ಆಸ್ತಿ ನನಗೆ ಬಂತು. ನಿಮಗೆ ಥ್ಯಾಂಕ್ಸ್. ಈಗ ನನ್ನ ಹೆಂಡ್ತಿ ನನ್ನ ಬಿಟ್ಟು ಹೋಗಿದಾಳೆ. ಅವಳು ವಾಪಸ್ ಬರೋಕೆ ಒಂದು ನೋಟೀಸ್ ಕೊಡಬೇಕಲ್ಲ ಅಂದ. ಯಾಕೆ ಬಿಟ್ಟು ಹೋಗಿದಾಳೋ ಅಂತ ಕಪಿನೀಪತಿ ಕೇಳಿದರು. ಅದೇನೋ ಗೊತ್ತಿಲ್ಲ. ಇವತ್ತು ಬೆಳಗ್ಗೆ ಒಂದು ಹತ್ತು ಸೀನು ಸೀನ್ದೆ. ಅದಿಕ್ಕೆ ಮೊದಲು ಕೊರೋನ ಸರಿ ಮಾಡ್ಕೊಳಿ ಆಮೇಲೆ ಬರ್ತಿನಿ ಅಂತ ಹತ್ತು ಮೈಲಿ ದೂರದ ಅಣ್ಣನ ಮನೆಗೆ ನಡೆದೇ ಹೋದಳು. ಕಪಿನೀಪತಿ ನಕ್ಕರು.

ಅದಕ್ಕೇನಂತೋ ನಿನಗೆ ಗೊತ್ತಿದಾರಲ್ಲ ನೂರು ರೂಪಾಯಿ ಡಾಕ್ಟರು ಅವರಿಗೆ ನೂರು ರೂಪಾಯಿ ಕೊಟ್ಟು ನಿನಗೆ ಕೊರೋನ ಇಲ್ಲ ಅಂತ ಒಂದು ಸರ್ಟಿಫಿಕೇಟ್ ಮಾಡಿಸಿಕೊಂಡು ಊರಿಗೆ ನೀನೂ ನಡ್ಕೊಂಡು ಹೋಗಿ ನಿನ್ನ ಹೆಂಡ್ತಿನ ಕರ್ಕೊಂಡು ಬಾ ಅಂದರು. ಹಂಗೇ ಆಗ್ಲಿ ಬುದ್ದಿ. ನಿಮ್ಮ ಫೀಸೆಷ್ಟು ಅಂತ ಕೇಳಿದ. ಕಪಿನೀಪತಿ ಮಾತಾಡಲಿಲ್ಲ.

ಅವತ್ತು ದಿನ ಹಾಗೇ ಕಳೆಯಿತು. ಮರುದಿನ ಬೆಳಗ್ಗೆ ಎದ್ದೋರು ಪೇಪರ್‌ಗೆ ಹುಡುಕಿದರು. ಹೆಂಡ್ತಿ ಪೇಪರ್ ನಿಲ್ಲಿಸಿರೋದು ತಿಳಿದು ಕಂಪ್ಯೂಟರ್ ಮುಂದೆ ಈಪೇಪರ್‌ಗಳನ್ನು ಓದಿದರು. ಮೊಬೈಲ್‌ನಲ್ಲಿ ನಂಬರ್ ಹುಡುಕುವಾಗ ಶ್ರೀನಿವಾಸನ ನಂಬರ್ ಕಾಣ ಸಿತು. ನಂಬರ್ ಒತ್ತಿದರು. ಅತ್ತ ಕಡೆಯಿಂದ ಓ ಭಾವ ಏನಿದು ಕರೋನ ಎಫೆಕ್ಟಾ ನೀವು ನನಗೆ ಫೋನ್ ಮಾಡಿದೀರ ಅಂದ ಶ್ರೀನಿವಾಸ. ಹೌದು ಕಣೋ, ಒಂಥರಾ ಹಾಗೇ ಅಂದ್ಕೊ. ಹೇಗಿದೀಯೋ ನಿಮ್ಮೂರಲ್ಲಿ ಕೊರೋನ ಎಫೆಕ್ಟು ಹೇಗಿದೆಯೋ ಅಂತ ಅರ್ಧ ಗಂಟೆ ಮಾತಾಡಿ ತಾಳು ನಿಮ್ಮಕ್ಕನ್ನ ಕೊಡ್ತೀನಿ ಅಂದು ಸಿತಾರಾ ನಿನ್ನ ತಮ್ಮ ಶ್ರೀನಿವಾಸ ಲೈನ್ ನಲ್ಲಿದಾನೆ ಅಂತ ಕೂಗಿದರು. ಹೆಂಡ್ತಿ ಬಂದು ತಮ್ಮನ ಹತ್ತಿರ ಅರ್ಧ ಗಂಟೆ ಮಾತಾಡಿದ ಮೇಲೆ ಗಂಡನನ್ನೇ ನೋಡುತ್ತಾ ಹಾಗೇ ನಿಂತರು. ಇದ್ಯಾಕೆ ಹೀಗೆ ನೋಡ್ತಾ ನಿಂತ್ಕೊಂಡೆ ಅಂತ ಕೇಳಿದರು. ಸಿತಾರ ಸಧ್ಯ ನನ್ನ ಹೆಸರು ನಿಮಗೆ ನೆನಪಿದೆಯಲ್ಲ ಇಷ್ಟು ದಿವಸ, ಲೇ, ಇವಳೇ, ಎಲ್ಲಿ ಹೋದ್ಯೇ ಅಂತೆಲ್ಲ ಕೂಗ್ತಿದ್ದೋರು ಇವತ್ತು ಸಿತಾರಾ ಅಂತ ಕೂಗಿದ್ರಲ್ಲ ಅದಿಕ್ಕೆ. ಮನೇಲಿ, ಮನೇಲೇನೂ ಬೀದೀಲೇ, ಬಡಾವಣೇಲೇ ಯಾರೂ ಇಲ್ಲ ಅಂತ ಹೆಂಡ್ತಿ ಸೊಂಟ ಬಳಸಿ ನೋಡು ಹೆಂಡ್ತಿ ಹೆಸರಲ್ಲಿ ಇರೋ ಮಧುರತೆಗಿಂತ ಗಂಡ ಅವಳನ್ನು ಕರೀತಾನಲ್ಲ, ಆ ಹೆಸರಲ್ಲೇ ಮಧುರತೆ ಹೆಚ್ಚಂತೆ. ಅದಕ್ಕೆ ಎಷ್ಟೋ ಜನ, ಎಷ್ಟೋ ಜನ ಏನು, ಬಹುತೇಕ ಎಲ್ಲ ಹೆಂಗಸರೂ ತಮ್ಮ ಗಂಡ ತಮ್ಮ ಹೆಸರನ್ನು ಬಿಟ್ಟು ಬೇರೆ ಯಾವುದಾದರೂ ಹೆಸರಿನಿಂದ ತಮ್ಮನ್ನು ಕರೆಯಲಿ ಅಂತ ಬಯಸ್ತಾರಂತೆ ಅಂದರು. ಸಿತಾರಾ ಗಂಡನನ್ನು ತಿರುಗುವ ಕುರ್ಚಿಗೆ ತಳ್ಳಿ ಒಳಗೆ ಹೋದರು.

ಅವತ್ತೆಲ್ಲ ಕಪಿನೀಪತಿ ಸುಮಾರು ಜನ ನೆಂಟರಿಗೆ, ಸ್ನೇಹಿತರಿಗೆ ದೂರವಾಣಿ ಕರೆ ಮಾಡಿ ಮಾತಾಡಿದರು. ಅವರೆಲ್ಲ ಮೊದಲಿಗೆ ಅಚ್ಚರಿ ಪಟ್ಟು ನಂತರ ಸಂತಸ ಪಟ್ಟರು. ಅದಾದ ನಂತರ ಕಪಿನೀಪತಿಗೆ ಜೀವನದ ಬಹು ಮಧುರವಾದ ಕ್ಷಣಗಳನ್ನು ನಾನು ಕಳೆದುಕೊಂಡಿದ್ದೆನಲ್ಲ ಅನಿಸಿತು. ವಾರಕ್ಕೊಮ್ಮೆಯಾದರೂ ಹೀಗೆ ಆತ್ಮೀಯರೊಂದಿಗೆ ಹರಟಿದರೆ ಮನಸ್ಸು ಅದೆಷ್ಟು ಹಗುರವಾಗುತ್ತದೆ ಅಂತ ಖುಷಿಯಾಯಿತು. ಒಂದೆರಡು ದಿನಗಳಲ್ಲಿ ಅವರ ಆತ್ಮೀಯರಿಂದ, ಸ್ನೇಹಿತರಿಂದ ಕರೆಗಳು ಬರಲಾರಂಭಿಸಿದವು. ಆಗ ಅವರಿಗೆ ಅರಿವಾದದ್ದು ನಾನು ಕರೆ ಮಾಡಿದರೆ ಅವರೂ ಕರೆ ಮಾಡುತ್ತಾರೆ, ನಾವು ಒಳ್ಳೆಯ ಅಕ್ಕರೆಯ ಮಾತುಗಳನ್ನಾಡಿದರೆ ಅವರೂ ಆಡುತ್ತಾರೆ. ನಾವು ಮಾಡಲಿ ಅಂತ ಅವರು, ಅವರು ಮಾಡಲಿ ಅಂತ ನಾವೂ ಮೊಬೈಲ್ ಇಟ್ಟುಕೊಂಡೂ ಸುಮ್ಮನಿದು ಮೊಬೈಲ್ ಕಂಪನಿಗಳಿಗೆ ಮಾತಾಡದೇ ಹಣ ತುಂಬ್ತೀವಿ ಅಂದುಕೊಂಡರು.

ಕಪಿನೀಪತಿ ಮಾಸ್ಕ್ ಹಾಕಿಕೊಂಡು ಬಾಗಿಲು ತೆಗೆದು ಹೊರಬಂದಾಗ ಪಕ್ಕದ ಮನೆಯವರು ಮರದಿಂದ ಬಿದ್ದಿದ್ದ ಎಲೆಗಳನ್ನು ಗುಡಿಸುತ್ತಿದ್ದರು. ಅವರೂ ಮಾಸ್ಕ್ ಹಾಕಿಕೊಂಡಿದ್ದರು. ಎಲಾ ಇವನಾ ನಾನು ಮುಖ ನೋಡಿ ನಕ್ಕರೂ ಸುಮ್ಮನಿದ್ದಾನಲ್ಲ ಅನಿಸಿದ ತಕ್ಷಣವೇ ಅಯ್ಯೋ ಮಾಸ್ಕ್ ಹಾಕಿಕೊಂಡಿದ್ದೀನಿ, ನಾನು ನಕ್ಕದ್ದು ಅವನಿಗೆ

ಹೇಗೆ ಗೊತ್ತಾಗಬೇಕು ಅಂದು ನಮಸ್ಕಾರ ಅಂದರು. ಅವನೂ ನಮಸ್ಕಾರ ಅಂದ. ಹೊಸದಾಗಿ ವಾಸಕ್ಕೆ ಬಂದಿದೀರ ಅಂತ ಕಪಿನೀಪತಿ ಕೇಳಿದ್ದಕ್ಕೆ ಇದು ನಮ್ಮ ಸ್ವಂತ ಮನೆ ನಾವು ವಾಸಕ್ಕೆ ಬಂದು ಹತ್ತು ವರ್ಷವಾಯಿತು ಅಂದರು. ಆಗ ಕಪಿನೀಪತಿ ಮತ್ತೆ ನಿಮ್ಮ ಮುಖ ನಾನು ಇವತ್ತೇ ನೋಡ್ತಿರೋದು ಅಂದರು. ಏನು ಮಾಡೋದು ಸ್ವಾಮಿ ಎಲ್ಲಾ ಕರೋನ ಎಫೆಕ್ಟು. ನಾನೇ ಎಷ್ಟೋ ಸಲ ನಿಮ್ಮನ್ನು ನೋಡಿ ನಮಸ್ಕಾರ ಹೇಳಿದರೂ ನೀವು ನೀನ್ಯಾವೋನಯ್ಯ ಅಂದ್ಕೊಂಡು ಹೊರಟುಹೋಗ್ತಿದ್ರಿ. ಆಗ ನಾನು ಓ ಇವರು ಲಾಯರು, ದುಡ್ಡು ಕೊಡೋ ಕ್ಲೈಂಟ್‌ಗಳ ಜೊತೆ ಮಾತ್ರ ಮಾತಾಡ್ತಾರೆ ಅಂದ್ಕೊಂಡು ಸುಮ್ಮನಾಗಿದ್ದೆ ಅಂದರು. ಕಪಿನೀಪತಿ ನಕ್ಕು ಹತ್ತು ವರ್ಷಗಳ ಮಾತನ್ನೆಲ್ಲ ಇವತ್ತೇ ಆಡೋಣ ಸಂಜೆ ನಮ್ಮ ಮನೆಗೆ ಮಾಸ್ಕ್ ಹಾಕಿಕೊಂಡು ಬನ್ನಿ ಅಂದರು.

ಮರುದಿನ ಬೆಳಗ್ಗೆ ಕಪಿನೀಪತಿ ಈಪೇಪರ್ ಓದ್ತಿರುವಾಗ ಸಿತಾರ ಕಾಫಿ ಕೊಟ್ಟು ದೂರ ನಿಂತಾಗ ಕಪಿನೀಪತಿ ನಕ್ಕು ಅದ್ಯಾಕೆ ದೂರ ನಿಂತ್ಕೊಂಡೆ ಈಗೇನು ನಿನ್ನ ಸೊಂಟ ಹಿಡ್ಕೊಳಲ್ಲ, ಅದ್ಸರಿ ಇವತ್ತು ಏನು ತಿಂಡಿ ಅಂತ ಕೇಳಿದರು. ದೋಸೆ ಅಂದರು. ಹೆಂಡತಿ ಕೈ ಹಿಡಿದು ಒಂದ್ಕೆಲಸ, ಇವತ್ತು ಅಡಿಗೆ ಮನೆ ಕೆಲಸ ಎಲ್ಲ ನಂದೇ, ನೀನು ನನ್ನ ತರ ಈಪೇಪರ್ ಓದು, ಟಿವಿ ನೋಡು, ಯಾರ್ಯಾರಿಗೆ ಬೇಕೋ ಅವರಿಗೆಲ್ಲ ಫೋನ್ ಮಾಡು, ಫಾರ್ ಎ ಛೇಂಜ್ ಹೇಗಿರುತ್ತೆ ನೋಡೋಣ ಅಂದರು. ಸ್ನಾನ ಮಾಡಿ ದೇವರ ಪೂಜೆ ಮಾಡಿ ಅಡಿಗೆ ಮನೆಗೆ ಹೋದರು. ಕಪಿನೀಪತಿಗೆ ಅಷ್ಟಿಷ್ಟು ಅಡಿಗೆ ಬರ್ತಿತ್ತು. ಫ್ರಿಜ್‌ನಲ್ಲಿ ದೋಸೆ ಹಿಟ್ಟಿತ್ತು. ಆಲೂಗೆಡ್ಡೆ ಈರುಳ್ಳಿ ಹೆಚ್ಚಿಟ್ಟುಕೊಂಡು ಕಾಯಿ ತುರಿಯೋಕೆ ಕೂತರು. ಸಿತಾರ ನಾನು ಕಾಯಿ ತುರ್ಕೊಡ್ತೀನಿ ಅಂದರು. ಬೇಡ ಇವತ್ತು ನೀನು ಅಡಿಗೆ ಮನೆ ಕೆಲಸ ಮಾಡಲೇಬಾರದು ಅಂದರು. ಕಾಯಿ ತುರಿದು ಚಟ್ನಿ ಮಾಡಿ, ಪಲ್ಯ ಮಾಡಿ ದೋಸೆ ಬಿಟ್ಟು ಬಿಸಿಬಿಸಿ ದೋಸೆನ ಹೆಂಡ್ತಿಗೆ ಕೊಟ್ಟರು. ಸಿತಾರ ಮೊದಲು ನೀವು ತಗೊಳಿ ಅಂದಿದ್ದಕ್ಕೆ ಎಲ್ಲಾದರೂ ಉಂಟೇ ಇವತ್ತು ನೀನು ಮೊದಲು ಅಂದರು. ನಿಮ್ಮ ರುಚಿಗೆ ನಾನೇ ಬಲಿಪಶುವಾಗಬೇಕಾ ಅಂದು ಸಿತಾರ ದೋಸೆ ಮುರಿದು ಪಲ್ಯ ಚಟ್ನಿ ಜೊತೆ ಬಾಯಿಗಿಟ್ಟುಕೊಂಡು ಅಗಿದು ತಿಂದು ನಾಟ್ ಬ್ಯಾಡ್ ಅಂದರು. ಹಾಗಾದರೆ ಗುಡ್ ಅನ್ನಬಹುದಲ್ಲ ಅಂದು ನಕ್ಕರು ಕಪಿನೀಪತಿ. ಅವತ್ತು ರಾತ್ರಿ ಹತ್ತು ಗಂಟೆಯವರೆಗಿವೂ ಕಪಿನೀಪತಿ ಅಡಿಗೆ, ತಿಂಡಿ, ಕಾಫಿ ಅಂತ ಮಾಡಿ ಪಾತ್ರೆ ತೊಳೆದು ಅವುಗಳನ್ನು ಒರೆಸಿ ಅವುಗಳ ಸ್ಥಾನದಲ್ಲಿಟ್ಟು ಮಧ್ಯೆ ಮಧ್ಯೆ ಸ್ನೇಹಿತರಿಗೆ ನೆಂಟರಿಗೆ ಫೋನ್ ಮಾಡಿ ಮಾತಾಡ್ತಾ ಇದ್ದರು. ರಾತ್ರಿ ಊಟ ಆದ ಮೇಲೆ ಅಡಿಗೆ ಮನೆ ಸ್ವಚ್ಛಗೊಳಿಸಿ ಕೋಣೆಗೆ ಬಂದು ಹೆಂಡತಿ ಪಕ್ಕ ಮಲಗಿ ಇವತ್ತು ನನ್ನಕೆಲಸ ಹೇಗಿತ್ತು ಅಂತ ಕೇಳಿದರು. ಸಿತಾರ ನಗುತ್ತಾ ನಿಮ್ಮ ಕೆಲಸಕ್ಕೆ ಬರೀ ಸಂಬಳ ಅಲ್ಲ ಇನ್ಸೆನ್‌ಟೀವು ಬೋನಸ್ಸೂ ಎಲ್ಲ ಕೊಡಬೇಕು ಅನಿಸಿದೆ ಅಂದದಕ್ಕೆ ಕಪಿನೀಪತಿ ಮುಸಿಮುಸಿ ನಕ್ಕರು. ಹೆಂಡ್ತಿ ಕೈ ಹಿಡಿದು ಅಡಿಗೆ ಮನೆ ಕೆಲಸದಲ್ಲಿ ಇಷ್ಟೊಂದು ಜವಾಬ್ದಾರಿ ಇರುತ್ತೆ, ಎಷ್ಟೊಂದು ಕಷ್ಟ ಇರುತ್ತೆ ಅಂತ ಇವತ್ತೇ ನನಗೆ ಗೊತ್ತಾದದ್ದು. ಬೇಸಿ ಹಾಕೋಕೆ ಇವಳಿಗೇನು ಅಂದ್ಕೊತಾ ಇದ್ದೆ. ಆ ಬೇಸಿ ಹಾಕೋದ್ರಲ್ಲೂ ಎಷ್ಟೊಂದು ಕಷ್ಟ ಇದೆ ಅಂತ ಇವತ್ತೇ ಗೊತ್ತಾದದ್ದು ಥ್ಯಾಂಕ್ಸ್ ಟು ಕೊರೋನ ಅಂದರು. ನಿಮಗೆ ನನ್ನ ಹೆಸರು ನೆನಪು ಮಾಡಿಸಿತು, ನಾನೂ ಒಬ್ಬಳು ಮನುಷ್ಯಳು ಅಂತ ನಿಮಗೆ ಅರಿವು ಮಾಡಿಸಿದ್ದೂ ಕೊರೋನ. ಕೊರೋನ ಇರಲಿ ಬಿಡಲಿ ನಾವು ಮಾತ್ರ ಇನ್ನು ಮುಂದೆ ಎಲ್ಲರೊಂದಿಗೂ ಸ್ನೇಹದಿಂದ, ವಿಶ್ವಾಸದಿಂದ, ಬಾಯಿ ತುಂಬಿ ಮಾತಾಡ್ತಾ, ಸಮಾಜದಲ್ಲಿ ಜನ ನಮ್ಮನ್ನು ಗುರುತಿಸುವಂತೆ ಇರೋಣ ಅಂದರು.

■

TEMPLE OF KNOWLEDGE

BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

Beechi Prakashana

Get your Book Published !

We provide Publishing, Marketing & Distribution support to Authors

- Sell your books both online & Retail(Book Shops)
- Get 100/ Royalty
- Retain Full copy Rights
- Publish your book faster
- Get paid for every book sold

ಬೀಚಿ ಪ್ರಕಾಶನ

ಲೇಖಕರೇ, ತಮ್ಮ ಪುಸ್ತಕಗಳು ಪ್ರಕಟವಾಗಬೇಕೆ?

ನಾವು ಲೇಖಕರಿಗೆ ಪುಸ್ತಕಗಳನ್ನು ಮುದ್ರಿಸಲು, ಮಾರಾಟ ಮಾಡಲು ಹಾಗೂ ವಿತರಿಸಲು ಸಹಕರಿಸುತ್ತೇವೆ.

- ನಿಮ್ಮ ಪುಸ್ತಕಗಳನ್ನು ಆನ್‌ಲೈನ್ ಮತ್ತು ಸಗಟು ವ್ಯಾಪಾರ ಮಳಿಗೆಗಳಿಂದ ಮಾರಾಟ ಮಾರಬಹುದು.(ಪುಸ್ತಕ ಅಂಗಡಿ).
- ರಾಯಧನ ೧೦೦% ಪಡೆಯುತ್ತೀರಿ.
- ನಕಲು ಹಕ್ಕುಗಳನ್ನು ಉಳಿಸಿಕೊಳ್ಳಿ.
- ನಿಮ್ಮ ಪುಸ್ತಕಗಳನ್ನು ತ್ವರಿತವಾಗಿ ಮುದ್ರಿಸಬಹುದು.
- ಪ್ರತಿ ಪುಸ್ತಕ ಮಾರಾಟದ ಬಳಿಕ ಹಣ ಪಡೆಯುತ್ತೀರಿ.

CONTACT: 9845264304

ಕೊರೊನಾ.... ಕೊರೊನಾ....

● **ಸಹನಾ ಪ್ರಸಾದ್**

ಕೊರೊನ, ಕೊರೊನ...
ಇರೋಣ, ಇರೋಣ..
ಮನೆಯಲ್ಲಿ ಹಿತವಾಗಿ
ತಿನ್ನೋಣ ಮಿತವಾಗಿ!

ಮನೆಯಲ್ಲಿ ಇರುವುದಕ್ಕೆ ಕಷ್ಟ ಪುಟ್ಟಕ್ಕನಿಗೆ. " ಕಾಲಿಗೆ ಚಕ್ರ ಕಣೇ ನಿನಗೆ!" ಎಂದು ಅವಳು ಚಿಕ್ಕವಳಿದ್ದಾಗ ಅವಳಮ್ಮ ಮೂತಿ ತಿವಿದು ಬೈದರೂ ಇವಳ ಕಾಲು ನಿಲ್ಲುತ್ತಾಇರಲಿಲ್ಲ. ಆಚೆ, ಈಚೆ ಮನೆಗಳು, ಬೀದಿ ಕೊನೇಲಿರೋ ಅಂಗಡಿ ಎಲ್ಲೋ ಒಂದು ಕಡೆ ಇವಳು ಅಡ್ಡಾಡ್ತಾನೆ ಇರ್ಬೇಕಿತ್ತು. ಕ್ಲಾಸ್ ಅಲ್ಲಿ ಕೂಡ ಸಿಕ್ಕಾಪಟ್ಟೆ ಓಡಾಟ ಇವಳದ್ದು. ಮಿಸ್ಸ್ ಎಷ್ಟು ಬೈದರೂ ಈ ಮಹರಾಯ್ತಿ ಕೂತ ಕಡೆ ಕೂರ್ತಿರ್ಲಿಲ್ಲ.ಚಾಕ್ಪೀಸ್ ತರಲೇ, ನಿಮ್ಗೆ ನೀರು ಬೇಕಾ ಮಿಸ್ಸ್ ಎಂದು ಮುಗ್ಧಳಂತೆ ಕೇಳಿದಾಗ ಮೊದಮೊದಲು ಮಿಸ್ಸ್ ಖುಷಿಯಾದರೂ ಆಮೇಲೆ ಇವಳು ತಿರುಗಾಲು ತಿಪ್ಪಿ ಎಂದು ಅರಿವಾದಾಗ ಸಿಟ್ಟಿಗೇಳುತ್ತಿದ್ದರು.

ಇನ್ನು ಕಾಲೇಜಲ್ಲಿ ತರಗತಿಗಿಂತ ಸುತ್ತಿದ್ದೇ ಹೆಚ್ಚು. ತಿರುಗಾಲು ತಿಪ್ಪಿ ಎನ್ನುವ ಬಿರುದು ಇದ್ದೇ ಇತ್ತು, ಈಗ ತಿಂಡಿ ಪೋತಿ ಎಂಬುದೂ ಜತೆಗಾಯಿತು. ಇದಕ್ಕೆ ಕಾರಣ, ಅಪ್ಪ ಪಾಕೆಟ್ ಮನಿ ಹೆಚ್ಚು ಮಾಡಿದ್ದು, ಮನೆಯಲ್ಲಿ ಸಿಗದೇ ಇರೊ ಹೊಸ ರುಚಿಗಳು ಕಾಲೇಜಿನ ಕ್ಯಾಂಟೀನ್, ಸುತ್ತಮುತ್ತಲಿನ ಅಂಗಡಿಗಳಲ್ಲಿ ದೊರಕಿದ್ದು. ಸಣ್ಣಗೆ ಬಳುಕುವ ಬಳ್ಳಿಯಂತೆ ಇದ್ದೆ ನಮ್ಮ ಹುಡುಗಿ, ಸ್ವಲ್ಪ ಟುನ್ ಟುನ್ ತರ ಕಾಣಿಸತೊಡಗಿದರೂ ಪಾದರಸ! ಎಲ್ಲೆಂದರಲ್ಲಿ ಚಕಚಕನೆ ಓಡಾಡುವುದಕ್ಕೆ ಇನ್ನೊಂದು ಹೆಸರೇ ಪುಟ್ಟಕ್ಕ. ಮಿಸ್ಸ್ ಮನೆಯಲ್ಲಿ ಬುಕ್ ಮರೆತು ಬಂದರೇ? ಗೆಳತಿ ತನ್ನಿನಯನಿಗೆ ಬರೆದ ಪ್ರೇಮ ಪತ್ರವನ್ನು ದಿಂಬಿನ ಕೆಳಗಿಟ್ಟು ಬಂದಿದಾಳೆಯೇ? ಅವರಮ್ಮ ನೋಡುವುದಕ್ಕೆ ಮುನ್ನ ತರಬೇಕಿದೆಯೇ? ಪುಟ್ಟಕ್ಕ ಇದಾಳಲ್ಲ!!

ಮದುವೆ ಗೊತ್ತಾದ ನಂತರ ಗಂಡನಾಗುವವ ಪಟ್ಟ ಪಾಡು ಅಷ್ಟಿಷ್ಟಲ್ಲ. ಆಸೆಯಿಂದ ಪಾರ್ಕು, ಸಿನೇಮಾ ಎಂದು ಕರೆದೊಯ್ದರೆ ಈಯಮ್ಮ ೫ ನಿಮಿಷ ಒಂದು ಕಡೆ ಕೂತರೆ ತಾನೇ! ಮದುವೆಯ ದಿನ ಸುತ್ತಮುತ್ತ ಜನರು ಇದ್ದರಿಂದ ತಾಳಿ ಕಟ್ಟುವುದರಲ್ಲಿ ಯಶಸ್ವಿಯಾದ!!

ಗೃಹಿಣಿಯಾದ ಮೇಲೆ ಚಕ್ರ ಸ್ವಲ್ಪ ತಡವಾಯಿತು, ಪ್ರಕ್ಷುಬ್ಧ ಮನಸ್ಸು ತಹಬಂದಿಗೆ ಬಂದಿತು. ಈಗ ಕೊರೋನ ಹಾವಳಿ ಷುರುವಾದ ಮೇಲೆ ಮನೆಯಲ್ಲೇ ಇರು, ಹಿತಮಿತವಾಗಿ ಉಣ್ಣು ಇದೆಲ್ಲ ನಮ್ಮ ಪುಟ್ಟಕ್ಕನಿಗೆ ಬಲು ಹಿಂಸೆಯಾಗತೊಡಗಿತು.ಮನೆಯಂಗಳದಲ್ಲಿ ಎಷ್ಟು ಅಂತ ಓಡಾಡುವುದು? ಮತ್ತದೇ ತರಕಾರಿ ಬೇಯಿಸಿ ತಿನ್ನುವುದು! ವಾರ ಕಳೆಯುವಷ್ಟರಲ್ಲಿ ಸಾಕು ಸಾಕಾಗಿ ಮಧ್ಯಾನ ಗಂಡ ಸಿಹಿ ನಿದ್ರೆಯಲ್ಲಿರುವಾಗ ಇವಳು ಕಳ್ಳ ಹೆಜ್ಜೆಯಿಟ್ಟು ಹೊರಬಂದಳು. ಯಾರಾದರೂ

ಸಿಗುತ್ತಾರೇನೊ, ಎಲ್ಲಾದರೂ ಯಾವ ಅಂಗಡಿ ತೆರೆದಿದೆಯೇನೊ ಅಂತ ಆಸೆಗಣ್ಣಿನಿಂದ ಹೆಜ್ಜೆ ಮೇಲೆ ಹೆಜ್ಜೆ ಇಡತೊಡಗಿದಳು. ಎಲ್ಲರ ಮನೆ ಬಾಗಿಲು, ಕಿಟಕಿ ಮುಚ್ಚಿದೆ. ಯಾವ ಅಂಗಡಿಯೂ ತೆರೆದಿಲ್ಲ. ಅಷ್ಟರಲ್ಲಿ ಯಾವುದೋ ಕೆಟ್ಟ ಜಂತುವೊಂದು ತನ್ನ ಬಳಿ ಸುಳಿದಂತಾಯಿತು.

ಜಂ: ಎಲಾ ಮೂರ್ಖ ಹೆಣ್ಣೆ, ಬಾ ಇಲ್ಲಿ! ನಿನ್ನ ತಬ್ಬಿ ಪಾಸಿಟಿವ್ ಮಾಡುವೆ!

ಪು: ಅರೆರೆ, ನೀನು ಕೊರೋನಾ. ಆದರೆ ನೋಡಲು ಒಳ್ಳೆ ಬಾಲ್ ಇದ್ದ ಹಾಗಿದೆಯಲ್ಲ. ಅದೇನು ನಿನ್ನ ಮೇಲೆ ಆ ಪಾಟಿ ಚೂಪುಗಳು?

ಕೊ: ನಿನ್ನಂತಹ ಮೂರ್ಖರ ಗಂಟಲಿನಲ್ಲಿ ಸಿಕ್ಕಿ ಹಾಕಿಕೊಂಡು ತೀವ್ರತರ ಹಿಂಸೆ ಕೊಡುವೆ! ಹಹಹ... ಈ ಚೂಪು ಏನೇನು ಮಾಡುತ್ತೆ ನೋಡು!

ಪು: ಅಯ್ಯೋ, ನನ್ನ ಗೆಳತಿ ಪವಿತ್ರಳ ಬಳಿ ಹೋಗು, ಅವಳ ನಾಲಿಗೆ ನಿನ್ನಷ್ಟೇ ಚೂಪು

ಕೊ: ಅವಳು ಸರಕಾರ ಹೇಳಿದ ಮಾತು ಕೇಳಿ ಮನೆಯಲ್ಲಿ ಟೀವಿ ನೋಡಿಕೊಂಡು ಆರಾಮವಾಗಿ ಇದಾಳೆ. ನಿನ್ನಂತೆ ಅಲ್ಲ

ಪು: ತಲೆ ಕೆರೆದುಕೊಳ್ಳುತ್ತಾ...

ಕೊ: ಕೈ ಬಾಯಿ ತೊಳೆಯೋದು ಹೇಳಿಕೊಡಬೇಕಾ? ಸಿಕ್ಕಿದ್ದೆಲ್ಲಾ ತಿನ್ನುವುದು ಬೇಡ ಎನ್ನುವುದನ್ನೂ? ಕಲಿಯಿರಿ ಮತ್ತೊಮ್ಮೆ ಎಲ್ಲರನ್ನೂ ತಬ್ಬುವುದು, ಹತ್ತಿರ ಬಿಟ್ಟುಕೊಳ್ಳುವುದು ತಪ್ಪು ಎಂದು

ಪು: ಇದ್ದುದರಲ್ಲೇ ಅಡುಗೆ ಮಾಡುತ್ತ ಇದೀನಿ, ಗಂಡನನ್ನು ಸಹ ಹತ್ತಿರ ಬರಬೇಡಿ ಎಂದಿರುವೆ.. ಬಿಟ್ಟುಬಿಡು ಕೊರೊನಾ

ಕೊ: ಆಚೆಮನೆ ಬಳ್ಳಿಯಲ್ಲಿ ಬಿಟ್ಟಿರುವ ಪಡವಲಕಾಯಿಯ ಮೇಲೆ ನಿನ್ನ ಕಣ್ಣಿಲ್ಲವೇನು? ಮೂರನೆಯ ಬೀದಿಯಲ್ಲಿ ಅವಿವಾಹಿತ ಯುವಕರು ಕದ್ದು ಮುಚ್ಚಿ ಪಾರ್ಸೆಲ್ ತಂದ ಪಿಜಾ ಬೇಕು ಅನಿಸಲಿಲ್ಲವೇನು!

ಅಷ್ಟರಲ್ಲಿ ಪುಟ್ಟಕ್ಕನ ಗಂಡ ಘಾಬರಿಯಿಂದ ಓಡಿ ಬರುತ್ತಿರುವುದು ಕಂಡಿತು. ಕೊರೊನ ಮಿತ್ಮೀರಿದ ಖುಶಿಯಲ್ಲಿ ಇವರಿಬ್ಬರ ಮೇಲೆ ಜಿಗಿಯುವುದಕ್ಕೆ ಅಣಿ ಮಾಡಿಕೊಳ್ಳುವುದಕ್ಕೂ, ಅದೇ ಸಮಯದಲ್ಲಿ ರಭಸದಿಂದ ಬಂದ ಪೋಲೀಸ್ ಜೀಪಿನ ಹೊಗೆಯಲ್ಲಿ ಅದರ ಉಸಿರು ಕಟ್ಟಿ ಅದು ಕೊನೆಯುಸಿರು ಎಳೆದದ್ದು, ಗಂಡ ಹೆಂಡರಿಗೆ ಮಂತ್ರಪುಷ್ಪಾರ್ಚನೆ ನಡೆದಿದ್ದು, ಪುಟ್ಟಕ್ಕನಿಗೆ ವಿಚ್ಛೇದನದ ಬೆದರಿಗೆ ಹಾಕಿದ್ದು, ಅವಳು ಸಿಟ್ಟಿನಿಂದ ಗಂಡನ ಕೆನ್ನೆಗೆ ಬಾರಿಸಿದ್ದು, ಪೋಲಿಸಿನವರು ಇಬ್ಬರನ್ನೂ ಮನೆಯೊಳಗೆ ತಳ್ಳಿದ್ದು, ಅಲ್ಲಿ ಅವರ ಜಗಳ ತಾರಕಕ್ಕೇರಿದ್ದು, ಒಂದೊಬ್ಬೆ ಕೋಡುಬಳೆ ತಿಂದು, ಮನೆಯಲ್ಲಿ ಎರಡು ಸುತ್ತು ವಾಕ್ ಮಾಡಿದ್ದು ಎಂಬಲ್ಲಿ ಪುಟ್ಟಕ್ಕನ ಕೊರೊನಾ ಕತೆ ಸಂಪನ್ನವಾಯಿತು!

■

ಕರೋನದಿಂದ ಲಾಲ್‌ಬಾಗ್‌ನ ತೊಳಲು

● ಪ್ರಕಾಶ್. ಆರ್

ಸುತ್ತಮುತ್ತಲಿನ ರಸ್ತೆಗಳು :

ಅದ್ಯಾಕೋ ಬಿಕೋ ಅನ್ನಿಸಿಬಿಟ್ಟಿದೆ, ಬೋರ್ ಆಗ್ತಿದೆ. ಕಾರುಗಳು , ದ್ವಿಚಕ್ರ ವಾಹನಗಳು ಬಂದು ನಿಲ್ಲುತಿದ್ದವು ನನ್ನ ಮೇಲೆ; ಮುಂಜಾನೆ ಆದರೆ ನೂರಾರು ಕಾಲುಗಳಿಗೆ ನೆಲೆ ಆಗಿದ್ದೆ ನಾನು; ಈಗ ಊಟವೇ ಇಲ್ಲದ ಹಾಗೆ ಆಗಿದೆ ನನಗೆ, ಏನಾಯಿತು ಈ ಕಾರುಗಳಿಗೆ, ಕಾಲುಗಳಿಗೆ.

ಮರಗಿಡಗಳು:

ಗೇಟಿನ ಒಳಗಿರುವ ನಮ್ಮ ಎಷ್ಟೋ ಬಾಂಧವರು ಮುತ್ತಾತ ಮುತ್ತಜ್ಜಿಗರಾಗಿದ್ದೀವಿ. ನಮ್ಮ ಜೀವ ಮಾನದಲ್ಲೇ ಇದೇ ಮೊದಲ ಸಲ ಇಷ್ಟೊಂದು ದಿನ ಯಾವ ಮನುಷ್ಯ ಪ್ರಾಣಿಯೂ ನಮ್ಮ ಸುತ್ತಮುತ್ತಲೂ ಸುಳಿಯದಿರುವುದು, ಕಾಣದಿರುವುದು. ಅವರುಗಳ ಫೋಟೋ ಹಿನ್ನೆಲೆಯಾಗಿ ಮೆರೆಯುತ್ತಿದ್ದೆವು , ಈಗ ನಮ್ಮ ಮುಂದೆ ನಿಲ್ಲುವ ಮನುಷ್ಯರೇ ಮಾಯವಾಗಿದ್ದಾರೆ .

ಗಿಡಮರ, ಹುಲ್ಲುಹಾಸು, ಬೆಂಚು, ಲೈಟ್ ಕಂಬಗಳು:

ನಮಗೆಲ್ಲಾ ಬೇರೆಯ ತರಹದ ಬೇಸರವೇ. ದಿನಾ ಅದೆಷ್ಟು ಪ್ರೇಮಿಗಳಿಗೆ ಆಸರೆ ಆಗುತಿದ್ದೆವು. ಪ್ರೇಮಕ್ಕೆ , ಜಗಳಕ್ಕೆ , ವಾದವಿವಾದಕ್ಕೆ, ಪುಸಲಾಯಿಸು ತನಕ್ಕೆ ಸಾಕ್ಷಿಯಾಗಿದ್ದೆವು. ಈಗ ನಮಗೆ ಒಂದು ತರಹ ಇರುಸು ಮುರುಸು. ಏನಾಯಿತು ಈ ಪ್ರೇಮಿಗಳಿಗೆ , ನಾವು ಬೇಡವಾದೇವೆ?

ಗಾಜಿನ ಮನೆ, ಬ್ಯಾಂಡ್ ಸ್ಟಾಂಡ್, ವಾಟರ್ ಫಾಲ್ಸ್, ಕೆಂಪು ಕಟ್ಟಡ :

ಅದೆಷ್ಟೋ ಐತಿಹಾಸಿಕ ಘಟನೆಗೆ ಸಾಕ್ಷಿಯಾಗಿದ್ದೀವಿ. ಸಾವಿರಾರು ಫೋಟೋಗಳಿಗೆ ಬ್ಯಾಕ್ ಗ್ರೌಂಡ್ ಆಗಿದ್ದೀವಿ , ಈಗಲೂ ಆಗುತಿದ್ದಿವಿ. ಆದರೆ ಈಗ ಒಂದಷ್ಟು ದಿನಗಳಿಂದ ನಮನ್ನು ಬ್ಯಾಕ್ ಗ್ರೌಂಡ್ ಅಲ್ಲಿ ಇಟ್ಟು ಕಿಸಿಯುವ ಮಂದಿಯೇ ಇಲ್ಲವಾಗಿದ್ದಾರೆ.

ಲಾಲ್ ಬಾಗ್ ಗುಡ್ಡ :

ಸಾವಿರಾರು ವರ್ಷ ವಯಸ್ಸಾದ ನನ್ನನ್ನು ಭಿನ್ನ ಭಿನ್ನ ರೀತಿಯಾಗಿ ನೋಡುತಿದ್ದರು. ನನ್ನನ್ನು ಹತ್ತಿ , ಎವರೆಸ್ಟ್ ಹತ್ತಿ ವಿಜಯ ಸಾದಿಸಿದರೆಂಬಂತೆ ನಿಟ್ಟುಸಿರು ಬಿಟ್ಟು ಫೋಟೋ ತೆಗೆದು ಕೊಳ್ಳುವವರು ಕೆಲವರು ಹೊಟ್ಟೆ ಕರಗಿಸುವ , ಸ್ವಾಸ್ಥ್ಯ ಕಾಪಾಡಿಕೊಳ್ಳುವ, ಸುಮ್ಮನೆ ಬಿಸಿ ಕಾಯಿಸುವ, ಮಲಗಿ ಆಕಾಶ ಮೋಡಗಳ ನೋಡುವ ಇನ್ನು ಕೆಲವರು ಎಲ್ಲಿ ಹೋದರು ಈ ಮಂದಿಯೆಲ್ಲಾ .

"ಇಲ್ಲಿ ಮೊಬೈಲ್ ಫೋಟೋ ತೆಗೆಯಬಾರದು" ನಾಮ ಫಲಕಗಳು :

ಎಲ್ಲೆಂದರಲ್ಲಿ ಸ್ವಲ್ಪವೂ ಎಚ್ಚರವಿಲ್ಲದೆ ಫೋಟೋ ತೆಗೆಯುವಾಗ ಒಂದಿಬ್ಬರು ಸತ್ತ ಮೇಲೇ, ನಾನು ಹುಟ್ಟಿಕೊಂಡಿದ್ದು. ನನ್ನನ್ನೂ ಅಲಕ್ಷಿಸದೆ ನನ್ನಲ್ಲೇ ಬಂದು ಫೋಟೋ ತೆಗೆಯುವ ಆ ಹುಚ್ಚು ಮಂದಿ ಏನಾದರು ?

ಕೋತಿ,ನಾಯಿ , ಅಳಿಲು , ಪಾರಿವಾಳ ಮತ್ತಿತರ ಪಕ್ಷಿ ಪ್ರಾಣಿಗಳು:

ದಿನವಾದರೆ ಸಕಾಲಕ್ಕೆ ಬಂದು ಒಂದಿಷ್ಟು ಹಣ್ಣು , ತರಕಾರಿ , ಕಾಳುಗಳು ಹಾಕುತಿದ್ದರು, ನಮಗೆ ಹೊಟ್ಟೆ ತುಂಬಿಸಲೋ , ಅಥವಾ ಅವರ ಪುಣ್ಯ ಪಡೆದುಕೊಳ್ಳಲೋ , ಇನ್ನು ಕೆಲವರು ನಾವು ತಿನ್ನುವುದರ ಫೋಟೋ ಹಿಡಿದುಕೊಳ್ಳಲೋ. ಏನಾಯಿತು ಈ ಮಂದಿಗೆ, ಸಮಯಕ್ಕೆ ಬಂದು ಕಾಯುವ ನಮಗೆ ಸುಮ್ಮನೆ ಹಿಂದಿರುಗುವ ಹಾಗಾಗಿದೆ

ಸಣ್ಣ ವ್ಯಾಪಾರಿಗಳು :

ಸೌತೆಕಾಯಿ, ಪೈನ್ ಆಪಲ್, ಕಡಲೆ ಕಾಯಿ, ಕಡಲೆ ಪುರಿ ಹೀಗೆ ಏನೋ ತಿಂಡಿ ತಿನಿಸುಗಳ ಮಾರಿಕೊಂಡು ಜೀವನ ಸಾಗಿಸಿಕೊಂಡು ಬಂದಿಹೆವು ಅದೆಷ್ಟೋ ದಶಕಗಳಿಂದ. ಇದೆ ನಮಗೆ ಜೀವನದಾಸರೆ. ಈಗ ಜನ ಬರುವಂತಿಲ್ಲ ನಾವು ಮಾರುವಂತಿಲ್ಲ, ಹೀಗೆ ಸಾಗುವುದೋ ನಮ್ಮ ಜೀವನ .

ಜನ, ಮಾತು, ಭಾವನೆ :

ದೇಶ ವಿದೇಶಗಳಿಂದ ಬರುವ ಜನರ ನೋಡಿ , ಅವರ ಮಾತು ಭಾಷೆ, ನಗೆ ಹಾಸ್ಯಗಳ ಕೇಳಿ ಮೆರೆಯಿತ್ತಿದ್ದ ನಮ್ಮ ಬಲೂನಿಗೆ ಯಾರೋ ಬಂದು ಒಂದು ಸೂಜಿಚುಚ್ಚಿದ ಹಾಗೆ ಆಗಿದೆ. ಅಥವಾ ಜನರೆಲ್ಲಾ ಸೇರಿ ನಮನ್ನು ಬಹಿಷ್ಕಾರ ಹಾಕಿದ್ದಾರೆಯೇ ಎಂಬ ಅನುಮಾನ. ನಮಗೆ ಇರುವಲ್ಲಿಯೇ ದೇಶ ವಿದೇಶಗಳ ಸಮಾಚಾರ , ರಾಜಕೀಯ, ಕೌಟುಂಬಿಕ ವಿಚಾರ , ರಿಯಲ್ ಎಸ್ಟೇಟ್ , ಸ್ಟಾಕ್ ಮಾರ್ಕೆಟ್, ಪ್ರೇಮ ಕಥೆಗಳು, ಸಿನಿಮಾ , ಆಹಾರ , ಪೌಷ್ಟಿಕತೆ , ಯೋಗ ಹಾಗೆ ಇನ್ನೇನೇನೋ ವಿಷಯಗಳು ಕೇಳಿಸಿಕೊಳುತಿದ್ದೆವು. ಈಗ ಏನಾಗುತ್ತಿದೆ ಅನ್ನೋದೇ ಗೊತ್ತಾಗುತ್ತಿಲ್ಲ, ಈ ಮನುಷ್ಯರುಗಳು ಬಾರದೆ.

ಎಂಟಿಆರ್ :

ನನಗೂ ಲಾಲ್‌ಬಾಗ್ ಗೂ ಇರುವ ನಂಟು ಬಹಳ ಹಳೆಯದು, ಒಬ್ಬರನೊಬ್ಬರು ಬಿಟ್ಟಿರಲಾರೆವು ಲಾಲ್‌ಬಾಗ್ ಮರೆತರೂ ನನನ್ನು ಮರೆಯುವಂತಿಲ್ಲ ಜನ ಆದರೆ ಈಗ ಎರಡನ್ನೂ ಮರೆತ ಹಾಗಿದೆ. ನನ್ನಲ್ಲಿ ಜನ ಜಂಗುಳಿ ಇಲ್ಲ , ಆರ್ಭಟೆ ಪಿಸುಮಾತುಗಳಿಲ್ಲ , ತಟ್ಟೆ ಲೋಟಗಳ ಸದ್ದಿಲ್ಲ, ತುಪ್ಪದ ಘಮ ಘಮ ಇಲ್ಲ, ಕಾಫಿಯ ಸ್ವಾದವಿಲ್ಲ , ಒಂದು ತರ ನಿರಾಳ ಮೌನ ಏನಾಯಿತು ಈ ಜನಕ್ಕೆ .

ಅಸಾಧಾರಣ ವಿಶೇಷ ಸಭೆ :

ಈ ಮನುಷ್ಯರ ಅನುಪಸ್ಥಿತಿ ಇಂದ ಲಾಲ್‌ಬಾಗ್ ನಲ್ಲಿರುವ ಸಂತತಿಗಳೆಲ್ಲಾ ಯೋಚನಾಸಕ್ತರಾಗಿ ಒಂದು ಅಸಾಧಾರಣ ವಿಶೇಷ ಸಭೆ ಕರೆದು ಈ ಮನು ಕುಲ ಅಳಿವಿನಂಚಿನಲ್ಲಿರುವಂತೆ ಕಾಣುತಿದ್ದೆ, ಇದಕ್ಕೇನಾದರೂ ಮಾಡಬೇಕಲ್ಲ ಅಂತ ಹೇಳಿ ಮಾನವರನ್ನು "ಅಳಿವಿನಂಚಿನಲ್ಲಿರುವ ಜಾತಿ" ಎಂದು ಪರಿಗಣಿಸಿ ಇದರಿಂದ ಹೊರತರುವ ಯೋಜನೆ ಹಾಕಿಕೊಳ್ಳುವ ಹಾದಿಯಲ್ಲಿವೆಯಂತೆ.

■

ಕೊರೋನಾಗೆ ಇದು ಸರೀನಾ?

● ಡಾ.ಶರಣಬಸವೇಶ್ವರ ಅಂಗಡಿ

ಕೋವಿಡ್‌ನಿಂದಾಗಿ ಇಡೀ ಜಗತ್ತೇ ತಲ್ಲಣಿಸುತ್ತಿರುವಾಗ "ಇದರ ಕಾಟಕ್ಕೆ ಕೊನೆ ಹೇಗೆ ಮತ್ತು ಯಾವಾಗ?. ಇದಕ್ಕೆ ಪರಿಣಾಮಕಾರಿ ಚಿಕಿತ್ಸೆಗಳಿವೆಯೇ?. ಇದರ ಹರಡುವಿಕೆ ತಡೆಯಲು ಲಸಿಕೆ ಇಲ್ಲವೇ?. ತ್ವರಿತವಾಗಿ ಹಬ್ಬುತ್ತಿರುವ ಈ ಹೆಮ್ಮಾರಿಯನ್ನು ಹಿಮ್ಮೆಟ್ಟಿಸುವ ಸಂಶೋಧನೆಗಳು ಯಾವ ಹಂತದಲ್ಲಿವೆ" ಎನ್ನುವ ಪ್ರಶ್ನೆಗಳು ಕಾಡುವುದು ಸಹಜ. ಜೊತೆಗೆ ವೈರಸ್‌ನ ಉಗಮ ಹಾಗೂ ಚಿಕಿತ್ಸೆ ಕುರಿತ ವದಂತಿ, ಊಹಾ ಪೋಹಗಳು ಆತಂಕವನ್ನು ಹೆಚ್ಚಿಸುತ್ತಲಿವೆ ಈ ಗೊಂದಲದ ಪರಿಸ್ಥಿತಿಯಲ್ಲಿ ನಿಖರವಾದ ವಿವರಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯಪಡಿಸಲು ಹೆಣಗುತ್ತಿರುವ ಸೆಂಟರ್ ಫಾರ್ ಪಬ್ಲಿಕ್ ಅಂಡರ್‌ಸ್ಟ್ಯಾಂಡಿಂಗ್ ಆಫ್ ಸೈನ್ಸ್ ಸಂಸ್ಥೆಯ ಡಾ.ಚನ್ನೇಶ್ ಮತ್ತು ಶ್ರೀ ಆಕಾಶ್ ಬಾಲಕೃಷ್ಣ ರ ಜೊತೆ ನನ್ನ ಅನುಮಾನ ಆತಂಕಗಳನ್ನು ಹಂಚಿಕೊಂಡೆ. ಅವರು ನೀಡಿದ ಸಮಜಾಯಿಷಿಯ ಸಂಗತಿಗಳು ಇಲ್ಲಿವೆ.

ಕೊರೋನಾ ಅಥವಾ ಯಾವುದೇ ರೋಗವನ್ನು ತಡೆಯುವ ಅಥವಾ ತೊಡೆಯುವ ಏಕೈಕ ಅಸ್ತ್ರ ನಮ್ಮೊಳಗಣ ಪ್ರತಿರೋಧಕ ಶಕ್ತಿ. ಅದು ಎಲ್ಲರಲ್ಲೂ ಒಂದೇ ಸಮನಾಗಿರುವುದಿಲ್ಲ. ಆದ್ದರಿಂದ ಕೊರೊನಾದಂಥ ವ್ಯಾಧಿ ವ್ಯಾಪಕಗೊಂಡಾಗ ಕಡಿಮೆ ನಿರೋಧಕ ಶಕ್ತಿಯವರು ರೋಗಕ್ಕೆ ಸುಲಭವಾಗಿ ಪಕ್ಕಾಗುತ್ತಾರೆ, ಅಂಥವರ ನಿರೋಧಕ ಶಕ್ತಿ ಹೆಚ್ಚಿಸುವುದರಿಂದ ಅವರನ್ನು ರೋಗದಿಂದ ರಕ್ಷಿಸಬಹುದು. ಲಸಿಕೆ ಅಥವಾ ವ್ಯಾಕ್ಸಿನ್ ಇದನ್ನು ಸಾಧ್ಯವಾಗಿಸುತ್ತದೆ

ಲಸಿಕೆಯಲ್ಲಿನ ಅರೆಕೊರೆ ಜೀವದ ವೈರಸ್ ದೇಹದೊಳಹೊಕ್ಕಾಗ ಪ್ರತಿರಕ್ಷಣಾ ವ್ಯವಸ್ಥೆ ಎಚ್ಚತ್ತು ನಿಜವಾದ ಶಕ್ತಿಯುತ ರೋಗಾಣುಗಳನ್ನೆದುರಿಸುವ ಸಾಮರ್ಥ್ಯ ಪಡೆಯುತ್ತದೆ. ವ್ಯಕ್ತಿಗತ ನಿರೋಧಕತೆಯ ಜೊತೆ ಗುಂಪು ಅಥವಾ ಸಮುದಾಯ ಪ್ರತಿರೋಧಕ ಶಕ್ತಿ (herd immunity)ಯೂ ಇರಬೇಕಾದ್ದು ಅಗತ್ಯ. ಇಲ್ಲವಾದಲ್ಲಿ ಲಾಕ್‌ಡೌನ್‌ನಿಂದ ಮನೆ ಗಳಲ್ಲಿ ಸುರಕ್ಷಿತವಾಗಿರುವ ಜನ ಹೊರಗೆ ಬಂದಾಗ ರೋಗಕ್ಕೆ ತುತ್ತಾಗುವುದು ಸುಲಭ. ಅಂಥ ಇಮ್ಯುನಿಟಿ ಬೆಳೆಯುವುದು ಜನ ಮುಕ್ತವಾಗಿ ಪರಸ್ಪರ ಬೆರೆತಾಗ . ಆದ್ದರಿಂದ ಲಾಕ್‌ಡೌನ್‌ನಿಂದ ರೋಗ ಪ್ರಸಾರವನ್ನೇನೋ ತಡೆಯಬಹುದು, ಆದರೆ ಹರ್ಡ್‌ಇಮ್ಯುನಿಟಿ ಬೆಳೆಸಲಾಗದು. ಏನೇ ಪ್ರಯತ್ನ ಮಾಡಿದರೂ ಅದು ಫಲಿಸಬೇಕಾಗಿರುವುದು ನಮ್ಮ ಇಮ್ಯೂನ್‌ವ್ಯವಸ್ಥೆಯಿಂದಷ್ಟೇ ಎಂಬುದು ಪರಮ ಸತ್ಯ.

ಸಿಡುಬು, ದಡಾರ ಪೋಲಿಯೋ ಮುಂತಾದ ವೈರಸ್‌ರೋಗ ಗಳಿಗಿರುವಂತೆ ಕೊರೊನಾಕ್ಕೂ ಸಹ ಲಸಿಕೆ ತಯಾರಿ ಸಾಧ್ಯ. ಹಲವಾರು ಅಕಾಡೆಮಿಯಾ, ಬಯೊಟೆಕ್‌ಮತ್ತು ಫಾರ್ಮಾ ಕಂಪನಿಗಳು ಹೊಸ ತಂತ್ರಜ್ಞಾನ ಬಳಸಿ ತ್ವರಿತ ಪ್ರಗತಿ ಗಳಿಸುತ್ತಲಿವೆಯೇನೋ ಹೌದು. ಆದರೆ ಹೊಸ ತಂತ್ರಜ್ಞಾನಗಳು ಹೇಗೆ ಕೆಲಸ ಮಾಡುತ್ತವೋ ತಿಳಿಯದು. ಈ ಪರಿಸ್ಥಿತಿಯಲ್ಲಿ ಹಲವು ತಂಡಗಳು ಬಗೆ ಬಗೆಯ ವ್ಯಾಕ್ಸೀನುಗಳನ್ನು ಅಭಿವೃದ್ಧಿಗೊಳಿಸುವುದು ಮುಖ್ಯ. ಮೊತ್ತ ಮೊದಲ ಲಸಿಕೆ ಚೀನಾ ದಿಂದ ವೈರಸ್ಸಿನ ಮೊದಲನೆಯ ವಂಶವಾಹಿಯ ಕ್ರಮಾನುಗತಿ ಲಭಿಸಿದ ನಾಲ್ಕೇ ವಾರಗಳಲ್ಲಿ ತಯಾರಾಯ್ತು, ಇದು ಸಾಧ್ಯವಾದದ್ದು ಭಾಗಶಃ Coalition for Epi-

demic Preparedness and Innovation -CEPI ಎಂಬ ಜಾಗತಿಕ ಪಾಲುದಾರಿಕೆಯಿಂದಾಗಿ. ಮೂರು ವರ್ಷಗಳಹಿಂದೆ ಅಸ್ತಿತ್ವಕ್ಕೆ ಬಂದಿರುವ ಸೆಪಿ ಸಂಸ್ಥೆಯ ಧ್ಯೇಯ ವಾಕ್ಯ "To stimulate and accelerate the development of vaccines against emerging infectious diseases and enable access to these vaccines for people during outbreaks." ಬರುವ ಆರರಿಂದ ಒಂಬತ್ತು ತಿಂಗಳಲ್ಲಿ ಲಸಿಕೆ ಲಭ್ಯವಾದೀತು. ಆದರೆ ಅದನ್ನು ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಿ ಎಲ್ಲರಿಗೂ ದೊರೆಯುವಂತೆ ಮಾಡುವುದು ಸವಾಲಾಗಬಹುದು. ಕೊರೊನ ವೈರಸ್‌ಪಾಂಡೆಮಿಕ್ ತಡೆಗಟ್ಟಲು ಲಸಿಕೆ ಗಳು ಮಹತ್ವಪೂರ್ಣವಾದುವು ಅದರೆ ಅವುಗಳಿಂದ ಶೀಘ್ರ ಪರಿಹಾರ ನಿರೀಕ್ಷಿಸಲಾಗದು. ಮೊದಲು ಅವುಗಳ ಕಾರ್ಯಕ್ಷಮತೆ ಅರಿಯಬೇಕು, ನಂತರ ಸುರಕ್ಷತೆ ಕುರಿತು ಪ್ರಾಣಿಗಳ ಮೇಲೆ ಪ್ರಯೋಗ ನಡೆಸಬೇಕು, ಮಾನವರ ಮೇಲೆ ಪ್ರಯೋಗಿಸಿ ಅವು ಕ್ಷೇಮಕರವೆಂಬುದನ್ನು ದೃಢಪಡಿಸಿಕೊಳ್ಳಬೇಕು. ಆಮೇಲೆ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದಿಸಿ ಸಮಯಕ್ಕೆ ಸರಿಯಾಗಿ ಪೂರೈಸಬೇಕು. ಇಷ್ಟೆಲ್ಲಾ ಆದಮೇಲೂ ರೋಗ ನಿಯಂತ್ರಣದ ನಂತರ ಲಸಿಕೆಗೆ ಬೇಡಿಕೆ ಇರುತ್ತದೆಂಬುದು ಅನುಮಾನ . ಈ ಎಲ್ಲಾ ಕಾರಣಗಳಿಂದಾಗಿ ಔಷಧ ತಯಾರಕ ಕಂಪನಿಗಳು ವ್ಯಾಕ್ಸಿನ್ ಅಭಿವೃದ್ಧಿ ಮತ್ತು ತಯಾರಿಕೆಗೆ ಹಣ ಹೂಡಲು ಹಿಂಜರಿಯುತ್ತಾರೆ.

ಸದ್ಯಕ್ಕೆ ವಿಶ್ವ ಆರೋಗ್ಯ ಸಂಸ್ಥೆ ತನ್ನ ಏಪ್ರಿಲ್೧೧ ರ ಪ್ರಕಟಣೆಯಲ್ಲಿ ಮೂರು ಕ್ಯಾಂಡಿಡೇಟ್(ಅಭ್ಯರ್ಥಿ) ಲಸಿಕೆಗಳು ಚಿಕಿತ್ಸಕ ಮೌಲ್ಯಮಾಪನ (ಕ್ಲಿನಿಕಲ್ ಎವ್ಯಾಲುಯೇಶನ್) ಘಟ್ಟದಲ್ಲಿವೆ ಎಂದಿದೆ. ಇನ್ನೂ ೬೭ ಕ್ಯಾಂಡಿಡೇಟ್ ಲಸಿಕೆಗಳು ಪ್ರಿ ಕ್ಲಿನಿಕಲ್‌ಸ್ತರದಲ್ಲಿವೆ

ಲಸಿಕೆ ಬಳಸಿ ರೋಗ ತಡೆಯುವ ಪ್ರಯತ್ನದ ಜೊತೆ ಜೊತೆಗೇ ವೈರಸ್‌ನ ಜೀವಕೋಶ ಪ್ರವೇಶಕ್ಕೆ ತಡೆಯೊಡ್ಡುವ ವಿಧಾನಗಳನ್ನೂ ವಿಜ್ಞಾನಿಗಳು ಪರೀಕ್ಷಿಸುತ್ತಲಿದ್ದಾರೆ. ವೈರಸ್‌ನ ಸೋಂಕಿಗೆ ನೆರವಾಗುವ ಅತಿಥೇಯ ಕೋಶಗಳಲ್ಲಿನ ACE2 & TMPRSS2 ಅಂಶಗಳನ್ನು ಕ್ಲಿನಿಕಲಿ ಪ್ರೂವನ್‌ಪ್ರೊಟಿಯೇಸ್ ಕಿಣ್ವ ಪ್ರತಿಬಂಧಕ ಬಳಸಿ ನಿಷ್ಕ್ರಿಯಗೊಳಿಸಬಹುದೆನ್ನುವ ಅಂಶವನ್ನರಿತ ಸಂಶೋಧಕರು ಇದರಿಂದ ರೋಗ ತಡೆ ಮತ್ತು ಚಿಕಿತ್ಸೆಯ ಪರ್ಯಾಯ ಪದ್ಧತಿಗಳನ್ನು ರೂಪಿಸುವ ಆಶಯವನ್ನಿರಿಸಿಕೊಂಡಿದ್ದಾರೆ.

ಇವಲ್ಲದೇ ಲಭ್ಯವಿರುವ ಔಷಧಿಗಳ ಪುನರುದ್ದೇಶಿಸುವಿಕೆಯಿಂದ ಸಾವಿನ ಸಂಖ್ಯೆ ತಗ್ಗಿಸಿ ಪಾಂಡೆಮಿಕ್ ನಿಯಂತ್ರಿಸುವುದೂ ಅತ್ಯಂತ ಮುಖ್ಯವೆನ್ನಿಸಿದೆ. ಅನೇಕ ಆಶಾದಾಯಕ ಔಷಧಿಗಳನ್ನು ಗುರುತಿಸಲಾಗಿದೆ. ಅವೆಲ್ಲವೂ ಜಾಗತಿಕವಾಗಿ ಕ್ಲಿನಿಕಲ್ ಟ್ರಯಲ್‌ಗಳ ವಿವಿಧ ಹಂತಗಳಲ್ಲಿವೆ. ಇವುಗಳ ಪರಿಣಾಮಕಾರತ್ವ ಸಾಬೀತುಗೊಂಡರೆ ಅವನ್ನು ತ್ವರಿತ ಗತಿಯಲ್ಲಿ ಬೃಹತ್‌ಪ್ರಮಾಣದಲ್ಲಿ ಉತ್ಪಾದಿಸಿ ಜನಸಾಮಾನ್ಯರ ಕೈಗೆಟಕುವ ಬೆಲೆಯಲ್ಲಿ ಲಭಿಸುವಂತೆ ಮಾಡಿದರೆ ಬಡ ದೇಶಗಳ ಜನತೆಗೆ ಮಹದುಪಕಾರವಾಗುತ್ತದೆ.

ವಿಶ್ವದ ಜನತೆಯ ಆರೋಗ್ಯಕ್ಕಾಗಿ ಅಹರ್ನಿಶಿ ಶ್ರಮಿಸುತ್ತಲಿರುವ ವೈದ್ಯ ಮತ್ತು ದಾದಿಯರ ಸಮೂಹ ಈ ಮಾರಕ ರೋಗಕ್ಕೊಂದು ಪರಿಹಾರ ಕಂಡುಕೊಳ್ಳಲು ಪ್ರಯಾಸ ಪಡುತ್ತಿರುವ ವಿಜ್ಞಾನಿಗಳ ವೃಂದಕ್ಕೆ ಕೃತಜ್ಞತೆ ಸಲ್ಲಿಸಲು ಶಬ್ದಗಳೇ ಸಾಲವು ಎನ್ನಿಸುತ್ತದಲ್ಲವೇ?

ಏನೇ ಬರಲಿ, ಶಿಸ್ತೊಂದಿರಲಿ

ಸಿ.ಆರ್.ಸತ್ಯ

ಕೊರೊನಾ ವೈರಸ್ ತರಹದ ಕಳಂಕ ನಮ್ಮ ಜನಸ್ತೋಮದ ಮೇಲೆ ಕಂಡರಿಯದ ಹಾನಿ ಹರಿಸಿದೆ, ಹರಿಸುತ್ತಿದೆ. ಬರುವ ದಿನಗಳಲ್ಲಿ, ವಾರಗಳಲ್ಲಿ, ನಮ್ಮೆಲ್ಲರ ಭವಿಷ್ಯ ಯಾವ ದಿಕ್ಕಿನಲ್ಲಿ ಬದಲಾಯಿಸಬಹುದೋ ಎಂದು ಹೇಳಲಸಾಧ್ಯವಾಗಿದೆ. ಏನಿದ್ದರೂ ಈ ಬಾಧೆಯನ್ನು ನಿವಾರಿಸಲು ನಾವು ಹರಸಾಹಸ ಪಡಬೇಕಿದೆ. ಈಗ ನಮ್ಮ ರಕ್ಷಣೆಗೆ ಕೈ ಕಟ್ಟಿ ನಿಂತಿರುವವರು ನಮ್ಮ ಸರಕಾರ–ಅದರ ಅಧಿಕಾರಿಗಳು–ಅದರ ನಾನಾ ಸೇವಾ ವಿಭಾಗಗಳು– ವೈದ್ಯ ಯೋಧರುಗಳು–ಅವರ ಸಹಾಯಕ ಸಿಬ್ಬಂದಿಗಳು– ಪೋಲೀಸ್ ಸಿಬ್ಬಂದಿ– ಸಾವಿರಾರು ಸ್ವಯಂಸೇವಕರು–ಹಣದ ದಾನಿಗಳು– ಹೀಗೆ. ಇಷ್ಟೂ ಜನ ನಮ್ಮ ರಕ್ಷಣೆಯ ಹೊಣೆ ಹೊತ್ತಾಗ ನಮ್ಮ ಕರ್ತವ್ಯವೇನು ಎಂದು ನಾವು ಪ್ರಶ್ನಿಸಿಕೊಳ್ಳುವುದು ಸಹಜ ಅಲ್ಲವೆ?. ಅದಕ್ಕೆ ಇರುವುದು ಒಂದೇ ಉತ್ತರ: ನಮಗೆ ತಿಳಿಸಿರುವ ನಿಯಮಗಳನ್ನು ಮುಕ್ತ ಮನಸ್ಸಿನಿಂದ ಚಾಚೂ ತಪ್ಪದೆ ಪಾಲಿಸುವುದು ಅಷ್ಟೆ. ಇಂತಹ ಆದರ್ಶ ಪಾಲನೆಗೆ ಬೇಕಾಗಿರುವುದು ಮತ್ತು ನಮ್ಮಲ್ಲಿ ಅವಶ್ಯಕವಾಗಿ ಇರಬೇಕಾದ ಗುಣವೆಂದರೆ ; ಶಿಸ್ತು.

ಮಾನವನ ಇತಿಹಾಸದಲ್ಲಿ ನೋಡಿದಾಗ ಶಿಸ್ತಿನಿಂದಾಗಿಯೇ ಅನೇಕ ಸಂದಿಗ್ಧ ಪರಿಸ್ಥಿತಿಯಿಂದ ಮಾನವ ಕುಲ ಹೊರಗೆ ಬಂದಿದೆ. ಅದು ಯುದ್ಧವಾಗಿರಬಹುದು, ಆರ್ಥಿಕ ಬಿಕ್ಕಟ್ಟಾಗಿರಬಹುದು, ಕೊರೊನಾ ರೀತಿಯ ಪೀಡೆಗಳಾಗಿರಬಹುದು ಅಥವಾ ರಾಜಕೀಯ ಆಂದೋಳನವಾಗಿರಬಹುದು. ಈ ರೀತಿ ಎಂತಹ ಪರಿಸ್ಥಿತಿಯಲ್ಲೂ ಶಿಸ್ತಿನ ಪಾಲನೆ, ಅದರಿಂದ ಕಾರ್ಯ ನಿರ್ವಹಣೆ, ಎಲ್ಲದಕ್ಕಿಂತ ಅದಕ್ಕೆ ಸಲ್ಲಿಸಬೇಕಾದ ಗೌರವ ಎಂದೂ ನಮಗೆ ಮುಕ್ತ ಪರಿಹಾರ ಕೊಡದಿದ್ದರೂ, ಗಮನಾರ್ಹ ಪರಿಹಾರವನ್ನಂತೂ ಕೊಟ್ಟೇ ಕೊಡುತ್ತದೆ ಎನ್ನುವುದು ಚಾರಿತ್ರಿಕ ಸತ್ಯ. ಕಾರಣ ಇಷ್ಟೆ: ಶಿಸ್ತಿನಿಂದ ಪೂರ್ವ ನಿಯೋಜಿತ ಯೋಜನೆಗಳನ್ನು ಯಾರ ಹಂಗೂ ಇಲ್ಲದೆ ಪಾಲಿಸಬಹುದು. ಗುರಿ ತಪ್ಪಿ ಅಚಾತುರ್ಯವಾಗುವುದು ಕಡಿಮೆ. ಶಿಸ್ತು ಜನರನ್ನು ಒಗ್ಗಟ್ಟಿನಿಂದ ಒಂದು ಅದ್ಭುತ ಸಂಘಟನೆಯಾಗಿ ಕೂಡಿಸುತ್ತೆ. ಶಿಸ್ತಿನಿಂದ ಹೊರಮೂಡಿದ ಪರಿಣಾಮ ಎಲ್ಲರಿಗೂ ಉತ್ಸಾಹವನ್ನು ಹುರಿದುಂಬಿಸುತ್ತೆ, ವೈಯುಕ್ತಿಕವಾಗಿ ಸ್ವನಿಯಂತ್ರಣಕ್ಕೆ ಅನುಕೂಲವಾಗುತ್ತದೆ. ಶಿಸ್ತು ಎಂಬ ಗುಣ ಮಾನವನಲ್ಲಿ ಇಂಗಿತವಾಗಿ ಇರಲೇ ಬೇಕಾದದ್ದು ಸಹಜ. ಆದರೆ ಹಾಗೆ ಯಾಕೆ ನಮ್ಮ ಅನುಭವದಲ್ಲಿ ನಮ್ಮಲ್ಲೂ ಅದು ಪೂರ್ಣವಾಗಿ ಕಾಣುತ್ತಿಲ್ಲ, ನಮ್ಮ ಸಮಾಜದಲ್ಲೂ ಕಾಣುತ್ತಿಲ್ಲ?

ಯಾಕೆ ನಾವು ಕೊರೊನಾ ನಿಯಂತ್ರಣ ನಿಯಮಗಳನ್ನು ಮುಕ್ತವಾಗಿ ಪಾಲಿಸುತ್ತಿಲ್ಲ? ನಮ್ಮ ನಡುವೆ ಅಂತರ ದೂರ ಪಾಲಿಸುತ್ತಿಲ್ಲ? ಕೆಲಸವಿಲ್ಲದೆ ರಸ್ತೆಗೆ ಇಳಿಯುತ್ತಿದ್ದೇವೆ. ಆಹಾರ, ಪರಿಹಾರ ವಿತರಣೆಯಲ್ಲಿ ಅನಾಚಾರ , ಸಾರಿಗೆ ಪಾಸ್ ಅನ್ನು ಬೇಕಾ ಬಿಟ್ಟಿ ಪಡೆಯುವುದು, ನಮ್ಮ ರಕ್ಷಣೆಗೆ ನಿಂತ ಪೋಲೀಸರನ್ನು ಹಾಗೂ ವೈದ್ಯರನ್ನು ಎದುರು ಹಾಕಿಕೊಳ್ಳುವುದು– ಇವೆಲ್ಲವೂ ಅಶಿಸ್ತಿನ ಪ್ರತೀಕಗಳೇ!. ಶಿಸ್ತು ಯಾವ ರೀತಿಯ

ಗುಣ ಲಕ್ಷಣ ಪಡೆದಿರಬೇಕೆಂಬುದಕ್ಕೆ ಯಾವ ಪೂರ್ವ ನಿಯಮವೂ ಇಲ್ಲ. ನಮ್ಮ ಎಚ್ಚರದ ಜೀವನದಲ್ಲಿ ನಮ್ಮ ಎಲ್ಲಾ ಚಲನ ವಲನಗಳಿಗೂ, ಎಲ್ಲಾ ಪ್ರಕ್ರಿಯೆಗಳಿಗೂ ಅನ್ವಯಿಸುತ್ತದೆ.

ನನ್ನ ಮನಸ್ಸಿಗೆ ಕೆಳಗಿರುವ ಉದಾಹರಣೆ ಜ್ಞಾಪಕ ಬರುತ್ತಿದೆ:
ಲಂಡನ್ ನಗರದಲ್ಲಿ ಎರಡನೇ ಮಹಾಯುದ್ಧದ ಕಾಲ. ತಮ್ಮ ದಿನ ನಿತ್ಯ ಬ್ರೆಡ್ ರೇಶನ್ ಗಾಗಿ ವಯಸ್ಸಾದವರು ಬೆಳಗಾಗೆದ್ದು ಸಾಲಾಗಿ ಕಾಯುತ್ತಿದ್ದರು. ಸ್ವಲ್ಪ ಹೊತ್ತಿನಲ್ಲೇ ಕೆಲವು ವೃದ್ಧರು ಪಕ್ಕದಲ್ಲೇ ಇನ್ನೊಂದು ಸಾಲಿನಲ್ಲಿ ನಿಂತರು. ಯಾಕೆ ಎಂದು ಕೇಳಿದಾಗ, ಅವರಲ್ಲಿ ಒಬ್ಬರು ಹೇಳಿದ್ದು: "ಇಂದು ಬೆಳಗ್ಗೆ ನನ್ನ ಇಬ್ಬರು ಗಂಡು ಮಕ್ಕಳೂ ಜರ್ಮನಿಯ ಯುದ್ಧ ಭೂಮಿಯಲ್ಲಿ ಮರಣ ಹೊಂದಿದರು ಎಂಬ ಸುದ್ದಿಯನ್ನು ನನಗೆ ಸರಕಾರ ಮುಟ್ಟಿಸಿದೆ. ಅವರಿಬ್ಬರ ಬ್ರೆಡ್ ಕೋಟಾವನ್ನು ವಾಪಸ್ಸು ಮಾಡಲು ಬಂದಿದ್ದೀನಿ!"

ಏನೇ ಬರಲಿ, ಶಿಸ್ತೊಂದಿರಲಿ!

■



ಕೃಪೆ: ಡೌನ್ ಟು ಅರ್ತ್

ಕರೋನ ಕಸರತ್ತು

● ಇ. ಆರ್. ರಾಮಚಂದ್ರನ್

ಅಜ್ಜಿ ಅಶ್ವತ್ಥ ಕಟ್ಟೆಯಿಂದ ಸ್ವಲ್ಪ ದೂರ ಕೂತಿದ್ದರು.

'ಏನಜ್ಜಿ.. ಮಡಿ ನಿನ್ನ ಕಟ್ಟೆಗೂ ಬಂದಿದೆಯಾ ಹೇಗೆ ?'

'ಕತ್ತೆ! ಎರಡು ಮಾರು ದೂರ ಇರೋ! ಬಾಯಿಗೆ ಮಾಸ್ಕು ಹಾಕಿದರೆ ಸಾಲ್ದು.'

'ಈ ಕರೊನ ತರಹ ಆಗುತ್ತೆ ಅಂತ ಯಾವತ್ತಾದ್ರೂ ನಿನಗೆ

ಕನಸಿನಲ್ಲಿ ಬಂದಿತ್ತಾ?'

'ಈ ತರಹ ಪ್ರಪಂಚದಲ್ಲಿ ಯಾವತ್ತೂ ಆಗಿರಲಿಲ್ಲ..ಇದು ಮೊದಲ ಬಾರಿ ಆಗುತ್ತಿದೆ. ಯುಗಾದಿಗೆ ಹೋಗವರು ಬರಬಹುದು..ಬರೋವರು ಹೋಗಬಹುದು..ಆದ್ರೆ ಹೋಗೋವರು ತಡ ಆದ್ರೆ ಬರಕ್ಕಾಗಲ್ಲ..ಬರೋವರು ತಡ ಮಾಡಿದ್ರೆ ಹೋಗೋಕ್ಕಾಗಲ್ಲ ಅಂತ ಸರ್ಕಾರ ಹೇಳಿದ್ದು..ಯಾರಿಗೂ ಅರ್ಥ ಆಗದೆ ಎಲ್ಲರೂ ಬೀದಿಲೇ ಇದ್ರು. ಮನೆಗೆ ಹೋಗದೆ ಬಾಗಿಲಲ್ಲೇ ಮಾವಿನಕಾಯಿ ಚಿತ್ರಾನ್ನ, ಹೋಳಿಗೆ ತಿಂದು ಬಹಳ ಜನ ವಾಪಸ್ಸು ಬಂದ್ರು..ಹೋದ್ರು.'

'ಹ ಹ..ಈ ಕರೊನ ಯಾತಕ್ಕೆ ಬಂದಿದೆ ಅಜ್ಜಿ?'

'ಹೇಳಕ್ಕೆ ಆಗಲ್ಲ..ಚೀನಾಕ್ಕೆ ಮೊದ್ಲು ಬಂತು..ಭೂಪರು ಜಪ್ಪಯ್ಯ ಅಂದ್ರು ಬಾಯಿ ಬಿಡೋದಿಲ್ಲ ಅವ್ರು ...ಅವ್ರು ಯಾವಾಗ್ಲೂ ಸ್ವಲ್ಪ ಹಾಗೇನೇ..ಕಿರಿಕ್ ಅನ್ಸುತ್ತೆ'

'ಮುಂದೆ ಹೀಗೆ ಆದ್ರೆ ಊಟ ತಿಂಡಿಗೆ. ಖೋತಾ ಬರುತ್ತೆ ಅಜ್ಜಿ..

'ನೀನು ಯಾವಾಗ್ಲೂ ಸಾಪಟ್ಟು ರಾಮು..ಇದೇ ಮೊದಲ ಬಾರಿ ಪ್ರಪಂಚದಲ್ಲೇ ಮಕ್ಕಳು ಸ್ಕೂಲಿಗೆ ಹೋಗದೆ ಎಲ್ಲರೂ ಮನೆಯಲ್ಲೇ ಇರೋದು..ಹೊರಗಡೆ ಆಟಕ್ಕೂ ಹೋಗೋ ಹಾಗೆ ಇಲ್ಲ..ಅವರ ಅಮ್ಮಂದಿರ ಸ್ಥಿತಿ ಯೋಚಿಸಿನೋಡು..'

'ಅದರ ಜೊತೆ ಯಾರೂ ಕೆಲಸಕ್ಕೆ ಹೋಗದೆ ಮನೇಲ್ಲೇ ಇರ್ತಾರೆ...ಅಜ್ಜಿ'

'ಮನೇಲಿ ಹೆಂಗಸರ ಪಾಡು ದೇವ್ರೇ ಗತಿಯನಿಸುತ್ತೇ...ಅದಿರಲಿ...ನಮ್ಮ ಸಿಎಂ ಕೆಲಸ ಹೋದವರಿಗೆ ದುಡ್ಡಿನ ವ್ಯವಸ್ಥೆ ಮಾಡಿದಾರಂತಲ್ಲ...'

'ಮಾಡಬೇಕಲ್ಲ.. ಅಜ್ಜಿ'

ಒಳ್ಳೆದೆ..ಮಾಡಬೇಕು..ಮೋಟಾರ್ ಬೈಕಿನಲ್ಲಿ ಬಂದು ಹೆಂಗಸರ ಚಿನ್ನದ ಚೈನ್ ಎಳೆದುಕೊಂಡು ಹೋಗ್ತಿದ್ರಲ್ಲ.... ಅವರ ಕೆಲಸಾನೂ ಹೋಯ್ತು.. ಅವರಿಗೂ ಏನಾದ್ರು ಕೊಡ್ತಾರೋ ಏನೋ..'

'ಅಜ್ಜಿ!'

ಹಾಗೆ... ಮನೇಲಿ ಹಿತ್ತಲ ಬಾಗಿಲು ಒಡೆದು ಇಲ್ಲ ಬೀಗ ಮುರಿದು ಕಳ್ಳತನ ಮಾಡೋವರಿಗೂ ಏನೂ ಸಿಗಲ್ಲ.. ಎಲ್ಲರೂ ಮನೇಲಿದ್ರೆ ಕನ್ನ ಹ್ಯಾಗೆ

ಹೊಡೀತಾರೆ..?.ಅವರ ಹೊಟ್ಟೆಗೂ ಏಟು ಬಿದ್ದಿದೆ.. ಅವರಿಗೂ ಏನಾದ್ರು ಸಹಾಯ ಮಾಡ್ಬೇಕಾಗುತ್ತೆ..'

'ಅಜ್ಜಿ..ನೀನು ವಿಚಿತ್ರವಾಗಿ ಯೋಚ್ನೆ ಮಾಡ್ತಿದೀಯ. ಆದ್ರೂ ಲಾಜಿಕ್ ಒಪ್ಪಬೇಕಾದ್ದೆ. ಅವರ ಕೆಲಸಕ್ಕೂ ಧಕ್ಕೆ ಬಂದಿದೆ . ಆಮೇಲೆ..ಮುಂದೆ ತರಕಾರಿ ಸಿಗಲ್ಲ. ಹಾಗೆ ಅಕ್ಕಿ, ಬೇಳೆ ಟೈಮ್ಗೆ ಸಿಗೋದು ಕಷ್ಟ..'

'ಏನ್ಮಾಡೋಣ ಅಂತಿಯ?'

'ನನ್ನ ಹತ್ತಿರ ಹಳೆ ಎರಡು ಮೂರು ಜೊತೆ ಮಿಲಟರಿ ಬೂಟ್ಸ್ ಇದೆ. ಕಾಲೇಜಿನಲ್ಲಿ ಡ್ರಿಲ್ಗೆ ಹಾಕ್ತಿದ್ದೆ.. ಅದನ್ನು ಅರ್ಧ ಘಂಟೆ ಚೆನ್ನಾಗಿ ನೀರಲ್ಲಿ ಬೇಯಿಸಿ ಅದನ್ನು ಕಟ್ ಮಾಡಿ ಉಪ್ಪು ಖಾರ ಸಾರಿನ ಪುಡಿ ಹಾಕಿಕೊಂಡು ತಿನ್ನ ಬಹುದು..ಬ್ರೆಡ್ ಉಪ್ಪಿಟ್ಟು ತರಹ ಇರುತ್ತೆ...ಹಸಿವು ಇಳಿಸುತ್ತೆ..ವಾರಕ್ಕೆ ಎರಡು ಸಲ ಬರುತ್ತೆ'.

'ರಾಮ ರಾಮ'

'ಅದನ್ನೇ ಇನ್ನು ಅರ್ಧ ಘಂಟೆ ಬೇಯಿಸಿದರೆ...ಅದು ಬಿಸಿ ಬೇಳೆ ಬಾತ್ ಆಗುತ್ತೆ ಅಂತ ಪಾಕ ಶಾಸ್ತ್ರ ಪಂಡಿತರು ಹೇಳಿದಾರೆ.'

ನಿನ್ನ ಹೀಗೆ ಬಿಟ್ರೆ ಇನ್ನು ಏನೇನು ಮಾಡ್ತಿಯೋ..

'ನನ್ನ ಹಳೆ ಪಾಯಿಜಾಮನ. 1x1 ಕತ್ತರಿಸಿ ಅದನ್ನು ಎಣ್ಣೆಯಲ್ಲಿ ಕರಿದು ಸಕ್ಕರೆ ಪಾಕ ಹಾಕಿದ್ರೆ ಕಾಫಿಗೆ ಶಂಕರ ಪೊಳಿ ಆಗುತ್ತೆ....ಎಲ್ಲಾ ಲಾಡಿಗಳನ್ನ ಸೇರಿಸಿ ಜೀರಿಗೆ ಒಗ್ಗರಣೆ ಹಾಕಿದ್ರೆ ಮನೆಲೆ ನೂಡಲ್ಸ್ ಆಗುತ್ತೆ..'

ಇನ್ನು ಏನೇನು ತಿನ್ನಸ್ಬಿಡ್ತ್ಯೋ.. ನಳ ಪಾಕ.'

'ಅಜ್ಜಿ...ಇದು ಇಲ್ದಿದ್ರೆ. ಚೈನಾ ದವರ ಹಾಗೆ ಚೇಳು ಹಲ್ವ.. ಹಾವುರಾಣಿ ಸಾಂಬಾರ್, ಕಾಕ್ರೋಚ್ ಬಾತ್ ಮಾಡ್ಬೇಕಾಗುತ್ತೆ'

'ಸಾಕೋ..ಸಾಕೋ..ಅದರಿಂದಲೇ ಅಲ್ವಾ ಇದೆಲ್ಲ ಶುರುವಾಗಿದ್ದು?'

....



ಕೃಪೆ: ಡೌನ್ ಟು ಅರ್ಥ್

ನುಡಿದಂತೆಯೇ ನಡೆದರು

● ಉಲ್ಲಾಸ ರಾಯಸಂ

ಈ ಸಂಕಷ್ಟದ ಸಮಯದಲ್ಲಿ ಮುಂಚೂಣಿಯಲ್ಲಿ ನಿಂತು ತಮ್ಮ ಕರ್ತವ್ಯದಕ್ಷತೆ ಯಿಂದ ನಮ್ಮನ್ನೆಲ್ಲಾ ಕಾಪಾಡು ತ್ತಿರುವ ಡಾಕ್ಟರುಗಳು, ನರ್ಸ್‌ಗಳು, ಆಶಾ ಕಾರ್ಯಕರ್ತರು ಮತ್ತು ಪೋಲೀಸ್ ಸಿಬ್ಬಂದಿಯನ್ನು ಕೃತಜ್ಞತೆಯಿಂದ ನೆನೆಯಲೇ ಬೇಕು. ಪೋಲೀಸ್ ಎಂದಾಗ ಹಾಸ್ಯಬ್ರಹ್ಮ ಬೀchi ಯವರು ನೆನಪಿಗೆ ಬರುತ್ತಾರೆ. ಏಪ್ರಿಲ್ ೨೩, ಬೀchiಯವರ ಜನ್ಮದಿನ. ಇದು ವಿಶ್ವ ಪುಸ್ತಕದ ದಿನವೂ ಹೌದು. ಬೀchi ಯವರು ಪೋಲೀಸ್ ಸರ್ವೀಸಿನಲ್ಲಿದ್ದಾಗ ಒಂದು ಹೃದಯಸ್ಪರ್ಶಿ ಘಟನೆ ನಡೆಯಿತು.

ಅವರ ಕಛೇರಿಯಲ್ಲಿ ಒಬ್ಬ ಕಾನ್‌ಸ್ಟೇಬಲ್ ಪದೇ ಪದೇ ರಜೆ ಹಾಕುತ್ತಿದ್ದ.

ಮೇಲಧಿಕಾರಿಗಳು ಈ ಬಗ್ಗೆ ರಿಪೋರ್ಟ್ ಮಾಡಲು ಬೀchiಯವರಿಗೆ ಹೇಳಿದರು. ಬೀchiಯವರು ಅವನನ್ನು ಕರೆಸಿ, " ಯಾಕೋ ರಾಮಪ್ಪಾ, ಸಸ್ಪೆಂಡ್ ಮಾಡ ಬೇಕೇನು? ಎಲ್ಲಿ ಹಾಳಾಗಿ ಹೋಗ್ತೀ ಪ್ರತೀಸಲಾ " ಅಂತ ಗದರಿಸಿದರು.

ರಾಮಪ್ಪ, " ಸ್ವಾಮಿ, ದಮ್ಮಯ್ಯ, ನನ್ನ ಹೆಂಡತಿಗೆ ಕ್ಷಯ, ಸಣ್ಣ ಮಕ್ಕಳು ಮನೆ ಯಲ್ಲಿ. ಅದರಿಂದ...."

ಬೀchiಯವರ ತಾಯಿ ಕೂಡಾ ಕ್ಷಯದಿಂದ ತೀರಿಕೊಂಡಿದ್ದರು.

ಬೀchiಯವರು ತಕ್ಷಣ " ರಾಮಪ್ಪ, ನೀ ಹೆದರಬೇಡಾ. ಮೂರು ತಿಂಗಳು ರಜೆ ಯನ್ನು ಮಂಜೂರು ಮಾಡಿಸ್ತೀನಿ. ಮನೆ ಕಡೆ ನೋಡಿಕೋ " ಎಂದು ಹೇಳಿ ಅವನನ್ನ ಕಳಿಸಿದರು.

ಮೂರು ತಿಂಗಳ ನಂತರ ಒಂದು ಸಂಜೆ ರಾಮಪ್ಪ ಬೀchi ಯವರಲ್ಲಿಗೆ ಬಂದ.

ಬೀchi ರಾಮಪ್ಪನ್ನ ನೋಡಿ, " ಹೆಂಡತಿ ಹೇಗಿದ್ದಾಳೆ?" ಅಂತ ವಿಚಾರಿಸಿದರು.

ಆತ, " ಈಗ ಚೆನ್ನಾಗಿದ್ದಾಳೆ ಸ್ವಾಮಿ, " ಎಂದು ಹೇಳಿ, ಚೀಲದಿಂದ ಹತ್ತು ಮೂಸಂಬಿ ಹಣ್ಣುಗಳನ್ನು ಮೇಜಿನ ಮೇಲಿಟ್ಟು,ಅದರ ಮೇಲೆ ಹತ್ತು ರೂಪಾಯಿಗಳನ್ನಿಟ್ಟ.

ಬೀchi ನಗುತ್ತಾ, " ರಾಮಪ್ಪಾ, ನಾನು ಒಂದು ಮೂಸಂಬಿ ತಗೋತೀನಿ, ಈ ಹಣ್ಣುಗಳು, ನಿನ್ನ ಹೆಂಡತಿ ಮತ್ತು ಬೆಳೆಯುವ ಮಕ್ಕಳಿಗೆ ಕೊಡು. ಅವರಿಗೆ ಅದರ ಅಗತ್ಯ ಇದೆ " ಎಂದು ಹೇಳಿ, ತಮ್ಮ ಜೇಬಿನಿಂದ ಹತ್ತು ರೂಪಾಯಿ ತೆಗೆದು ಅವನು ಕೊಟ್ಟ ಹಣಕ್ಕೆ ಸೇರಿಸಿ, " ಇದರಿಂದ ದ್ರಾಕ್ಷಿ, ಗೋಡಂಬಿ, ಉತ್ತತ್ತಿ, ಇವನ್ನೆಲ್ಲಾ ಕೊಂಡು ಮನೆಯಲ್ಲಿ ಕೊಡು. ಇನ್ನೊಂದು ಮಾತು. ಲಂಚ ತಗೊಳ್ಳೋದು ತಪ್ಪು, ಕೊಡೋದು ಇನ್ನೂ ತಪ್ಪು. ನೆನಪಿರಲಿ, ಲಂಚ ಎಂಜಲು. ನಡೀ ಈಗ. ನಾಳೆ ಕಛೇರೀಗೆ ಬಾ" ಎಂದು ಅವನನ್ನು ಬೀಳ್ಕೊಟ್ಟರು.

ಬೀchiಯವರ ಮಗ, ಶ್ರೀನಿವಾಸಮೂರ್ತಿ ಡಾಕ್ಟರ್ ಆದಾಗ, ಅವನನ್ನು ಬಳಿ ಕರೆದು ' ನೀನು ಸರ್ಕಾರಿ ಡಾಕ್ಟರ್ ಆಗುವುದು ಬೇಡ. ಕ್ಲಿನಿಕ್ ತೆಗಿ. ನಿನ್ನ ವೃತ್ತಿಯ ಧ್ಯೇಯ ಮರೆಯಬೇಡ. ನೀ ಯಾರ ಎದೆಯ ಮೇಲೆ

ಸ್ಟೆಥ್ ಇಡ್ತೀಯೋ ಅವರನ್ನ ತಾಯಿಯಂತೆ ಕಾಣು. ನೀ ಹಣದ ಡಾಕ್ಟರ್ ಆಗ ಬೇಡ. ' ಎಂದು ಹಿತವಚನ ನುಡಿದಿದ್ದರು.

ಶ್ರೀನಿವಾಸ ಮೂರ್ತಿಯೂ ತಮ್ಮ ತಂದೆಯ ಮಾತಿನಂತೇ ನಡೆದುಕೊಂಡರು. ಕ್ಲಿನಿಕ್‌ನಲ್ಲಿ ಒಂದು ಡಬ್ಬಿ ಇಟ್ಟಿದ್ದರು. ಯಾರನ್ನೂ ಹಣ ಕೇಳುತ್ತಿರಲಿಲ್ಲ. ಕಾರಿನಲ್ಲಿ ಬರುವವರು ನಾಲ್ಕಾಣೆ ಹಾಕಿದರೆ ಬಡವರು ಒಂದು ರೂಪಾಯಿ ಹಾಕುವ ಅನೇಕ ಪ್ರಸಂಗಗಳಿದ್ದವು.

ನುಡಿದಂತೇ ನಡೆದವರ ಪುಣ್ಯಸ್ಮರಣೆ ಈ ದಿನ.

■

ಕೃಪೆ: ಡೌನ್ ಟು ಅರ್ತ್

ಕೊರೊನಾ ಚಿಟ್ಟು...

● ಪ್ರಕಾಶ್ ಶೆಟ್ಟಿ

ನಿಮ್ಮ ಟೂಥ್ ಪೇಸ್ಟ್ ನಲ್ಲಿ ಉಪ್ಪು ಇದೆಯಾ ? ಎಂದು ಕೇಳಿದಂತೆ 'ನಿಮ್ಮ ಪತ್ರಿಕೆಯಲ್ಲಿ ಕೊರೊನಾ ಇದೆಯಾ?' ಎಂದು ಓದುಗರು ಕೇಳಿಕೊಳ್ಳುವ ದಿನವೂ ಬಂತು ನೋಡಿ! ಪಾಪ, ದಿನಪತ್ರಿಕೆಗಳು ಅದಕ್ಕೆ ಅದೇನೋ ಸಮಾಜಾಯಿಸಿ ಕೊಟ್ಟರು ಅನ್ನಿ. ಆದರೆ ವಾಸ್ತವ ಸಂಗತಿ ಅಂದರೆ ಕಳೆದ ಒಂದು ತಿಂಗಳಿನಿಂದ ಯಾವುದೇ ಪತ್ರಿಕೆಗಳನ್ನು ತೆಗೆದುಕೊಳ್ಳಿ, ಅರಂಭದ ಪುಟದಿಂದ ಕೊನೆಯ ಪುಟದ ವರೆಗೂ ಕೊರೊನಾ ವೈರಸ್ ತುಂಬಿ ತುಳುಕಾಡುತ್ತಿವೆ! ಗಾಬರಿಯಾಗಬೇಡಿ ಸ್ವಾಮಿ. ನಾನು ಹೇಳುತ್ತಿರುವುದು ಏನಪ್ಪಾಂದರೆ ವೈರಸ್ ಸುದ್ದಿಗಳಿಲ್ಲದ ಬೇರೆ ಸುದ್ದಿಗಳೇ ಇಲ್ಲ ಎಂದು.

ಅದು ಆರ್ಥಿಕತೆ ಯ ಬಗ್ಗೆ ಸುದ್ದಿಯಾಗಿರಬಹುದು, ಶಿಕ್ಷಣ ಆಗಿರಬಹುದು ಅಥವಾ ಕೃಷಿಯೋ, ಸಿನಿಮಾವೋ ಆಗಿರಬಹುದು. ಅಲ್ಲಿ ವೈರಸ್ ಲಿಂಕ್ ಇದ್ದೇ ಇದೆ. ನ್ಯೂಸ್ ಪ್ರಿಂಟ್ ಮೇಲೆ ಇಷ್ಟೊಂದು ವ್ಯಾಪಕವಾಗಿ 'ಕೊರೊನಾ' ಹರಡಿರುವಾಗ ನನ್ನ ತಲೆ ಚಿಟ್ಟು ಹಿಡಿಯಲಾರಂಭಿಸಿತು. ಲಾಕ್ ಡೌನ್ ಆದ ಮಾತ್ರಕ್ಕೆ ಭಾರತದಲ್ಲಿ ಬೇರೇನೂ ನಡೆಯುತ್ತಿಲ್ಲವೇ? ನನಗೆ ಇದನ್ನು ಸಂಶೋಧಿಸುವ ಕುತೂಹಲ ಹೆಚ್ಚಾಯಿತು, ವಿಜ್ಞಾನಿಗಳು ಕೊರೊನಾಕ್ಕೆ ತುರ್ತಾಗಿ ಔಷಧಿಯ ಸಂಶೋಧನೆಯಲ್ಲಿ ತೊಡಗಿರುವಾಗ ಇವನದ್ದು ಏನಪ್ಪಾ ಮಣ್ಣಂಗಟ್ಟಿ ಸಂ ಶೋಧನೆ! ಎಂದು ನೀವು ನನ್ನನ್ನು ದೂರಿದರೂ ಪರವಾಗಿಲ್ಲ. 'ಸಂಶೋಧನೆ'ಯಲ್ಲಿ ಮುಳುಗಿದಾಗ ನನಗೆ ಮೊತ್ತ ಮೊದಲು ಗೋಚರಿಸಿದ್ದು , ಎದೆಗುಂದದೆ ಸಾಗುತ್ತಿರುವ ನಕಲಿ ವ್ಯಾಪಾರ! ಎಷ್ಟೆಂದರೂ ಮಾರುಕಟ್ಟೆಯಲ್ಲಿ ಆಗ ತಾನೇ ಸೆನಿಟೈಸರ್‌ಗೆ ಎಲ್ಲಿಲ್ಲದ ಬೇಡಿಕೆ ಬಂದಿರುವಾಗ, ನಕಲಿ ವ್ಯವಸ್ಥೆ ಮಾಡದಿದ್ದರೆ ಅವರ ಕಸುಬಿಗೆ ದೊಡ್ಡ ಕಳಂಕವಲ್ಲವೇ! ಇನ್ನು ಕಳ್ಳರು. ಬಹಳ ಜನ ಉದ್ಯೋಗವಿಲ್ಲದೆ ಮನೆಯಲ್ಲಿರುವಾಗ, ಕಳ್ಳರು ತಮ್ಮ ಉದ್ಯೋಗದಲ್ಲಿ ನಿರತರಾಗಿದ್ದಾರೆ. ನೀವು ಗಮನಿಸಿದ್ದೀರೋ ಇಲ್ಲವೋ...ಫೈನಾನ್ಸ್ ಕಂಪೆನಿಯೊಂದಕ್ಕೆ ಕಳ್ಳರು ನುಗ್ಗಿ ಹಣ ದೋಚಲು ಪ್ರಯತ್ನಿಸಿದ್ದರು. ಮನೆಯಲ್ಲಿ ಮಾಲೀಕರು ಇರುವಾಗಲೇ ಕಳ್ಳರು ಒಡವೆಗಳನ್ನು ಕದ್ದೊಯ್ದಿದ್ದರು. ವೈನ್ ಶಾಪ್‌ಗಳಂತೂ ಕಳ್ಳರಿಗೆ 'ಹಾಟ್‌ಸ್ಪಾಟ್'ಗಳು! ಅಷ್ಟೇ ಯಾಕೆ... ಆಸ್ಟ್ರೇಲಿಯಾದ ಕ್ರಿಕೆಟ್ ಕ್ಯಾಪ್ಟನ್ ಟಿಮ್ ನ ಪರ್ಸ್ ಕಳವಾಗಿತ್ತು. ಸರಗಳ್ಳರಿಗೆ ಮಾತ್ರ ಬೀದಿಗಳು ಬಿಕೋ ಆಗಿರುವುದರಿಂದ ಅವರು ಬೀದಿ ನಾಯಿಗಳ ಸ್ಥಿತಿಗೆ ತಲುಪಿದ್ದಾರೆ ಎಂದು ನನ್ನ ಬಲವಾದ ಸಂಶಯ. ಲಾಕ್ ಡೌನ್ ಹೊತ್ತಿಗಾದರೂ ನಮ್ಮದು 'ಭ್ರಷ್ಟಾಚಾರ ರಹಿತ ರಾಜ್ಯ' ಆಗಿದೆ ಎಂದು ಹೆಮ್ಮೆ ಪಡಬಹುದೋ? ಇಲ್ಲ, ಸಾಧ್ಯವೇ ಇಲ್ಲ! ಮೊನ್ನೆ ಬೆಂಗಳೂರಿನಲ್ಲಿ ಪೋಲೀಸಪ್ಪ ಹಾಲಿನ ಅಂಗಡಿಯೊಂದಕ್ಕೆ ಹಫ್ತಾ ವಸೂಲಿಗೆ ಬಂದು ಪೇಚಿಗೆ ಸಿಕ್ಕಿ ಹಾಕಿಕೊಂಡಿದ್ದು ಗೊತ್ತಿಲ್ಲವೇ? ಇನ್ನೊಂದು ಕಡೆ ಅಂತಹ ಕಾಯಿಲೆ ಇರುವ ಪೋಲೀಸಪ್ಪರನ್ನು ಸ್ವತಃ ಪೊಲೀಸ್ ಅಧಿಕಾರಿ ರವಿ ಚೆನ್ನಣ್ಣ ಮಾರುವೇಷದಲ್ಲಿ ಹಿಡಿಯಬೇಕಾಯಿತು. ನಿಧಾನ ಸೌಧ, ನರಕ ಪಾಲಿಕೆಗಳಲ್ಲಿ ಮಧ್ಯವರ್ತಿಗಳು ಮತ್ತಿತರ ನುಂಗಪ್ಪರುಗಳು ಕಮಿಷನ್

ಒಮಿಷನ್‌ಗಳಿಂದ ಅಂತರ ಕಾಪಾಡಿಕೊಂಡು ಬಂದಿರಬಹುದೆಂದು ನೀವು

ಊಹಿಸಿದ್ದರೆ ಅದು ತಪ್ಪು.

ಅಚ್ಚರಿಯೆಂದರೆ ನ್ಯಾಯದೇವತೆ ಕೂಡಾ ಲಾಕ್ ಡೌನ್ ಅವಧಿಯಲ್ಲಿ ಸುಮ್ಮನೆ ಕುಳಿತಿರಲಿಲ್ಲ. ಮನೋವೈದ್ಯರೊಬ್ಬರಿಗೆ ರೂ.10ಸಾವಿರ ದಂಡ ವಿಧಿಸಿದೆ. ಎಣ್ಣೆ ಪಾರ್ಟಿಗಳಿಗೆ ತನ್ನ ಕೈಲಾದ ಸಹಾಯ ಮಾಡೋಣವೆಂದು ಮದ್ಯ ಮಾರಾಟಕ್ಕೆ ಅನುಮತಿ ನೀಡಲು ಪಿಐಎಲ್ ಸಲ್ಲಿಸಿದ್ದೇ ಆ ವೈದ್ಯರು ಮಾಡಿದ ಅಪರಾಧ!

ಗೃಹ ಬಂಧನದಲ್ಲಿರುವಾಗ ಮದುವೆ ಬಂಧನ ಸಾಧ್ಯವೇ? ಯಾಕಾಗಲ್ಲ? ಎದುರಿಗೆ ಲ್ಯಾಪ್ ಟಾಪ್ ಇಟ್ಟುಕೊಂಡು 'ಹಿರಿಯರ ಸಮ್ಮುಖದಲ್ಲಿ' ಕೆಲವರು ತಾಳಿ ಕಟ್ಟಿದರಲ್ಲ! ಹೀಗೂ ಲಫ್ಡವಾಗುತ್ತಾ ಎಂದು ನೀವು ಮೂಗು ಮುರಿದರೆ, ಅತ್ತ ವಿಜಯಪುರದಿಂದ ಸುದ್ದಿ ಬಂದಿದೆ ನೋಡಿ.. ಇಬ್ಬರು ಹುಡುಗಿಯರು ಪರಸ್ಪರ ಮದುವೆಯಾಗಿದ್ದಾರಂತೆ! ಅದೆಂತಹ ವೈರಸ್ಸು ಬರಲಿ, ಕೆಲವರಿಗೆ ಅವರದ್ದೇ ಚಿಂತೆ. ಉದಾಹರಣೆಗೆ ಪೆಟ್ರೋಲಿಯಂ ಸಚಿವಾಲಯ. ಅವರಂತೂ ತಮ್ಮ ಪಾಡಿಗೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಸಿಯೇ ಬಿಟ್ಟಿದ್ದಾರೆ.ಕಾಶ್ಮೀರ ಗಡಿಯಲ್ಲಿ ಉಗ್ರರನ್ನು ತೆಗೆದುಕೊಳ್ಳಿ. ಭಾರತದ ಸೈನಿಕರೂ ಕೂಡಾ 'ಸ್ಟೇ ಹೋಮ್' ನಲ್ಲಿದ್ದಾರೆ ಎಂದು ಭಾವಿಸಿದ್ದಾರೋ ಏನೋ , ಅವರು ಒಳನುಸುಳಲು ಪ್ರಯತ್ನಿಸಿ ಹೆಣವಾಗಿದ್ದಾರೆ.

ಈಗ ಹೇಳಿ...ಕೊರೊನಾ ಕಾಲದಲ್ಲಿ ವೈರಸ್ಸುದ್ದಿಗಳು ಮಾತ್ರ ಬರ್ತಾ ಇವೆಯಾ?

■



ಕಿರುಗವನಗಳು

ಸಂಪರ್ಕ

ನಿರಂತರ ಸಂಪರ್ಕವಿಲ್ಲದೇ
ಸಂಬಂಧಗಳು ರುಚಿಸಲ್ಲ
ನಿರಂತರ ಗೌರವವಿಲ್ಲದೇ
ಪ್ರೀತ್ಯಾದರಗಳು ತರವಲ್ಲ
ನಿರಂತರ ನಂಬಿಕೆ ಇಲ್ಲದೇ
ಸ್ನೇಹ, ಪ್ರೀತಿ ಸಾಧುವಲ್ಲ

ಪ್ರಾಮುಖ್ಯ

ಕಳೆದುಹೋದ
ಬದುಕಿಗಿಂತ
ಮುಂದಿರುವ ಬದುಕು
ಹೆಚ್ಚು ಪ್ರಾಮುಖ್ಯ

ತ್ಯಾಗ

ತಾವಿದ್ದ ಬೆಂಕಿಯಿಂದ
ಹೊರಬಂದು
ಇನ್ನೂ ಬೆಂಕಿಯಲ್ಲಿ
ಬೇಯುತ್ತಿರುವವರಿಗಾಗಿ
ಬಕೀಟುಗಟ್ಟಲೆ ನೀರು
ಸುರಿಯುತ್ತಿರುವವರು
ನಿಜವಾಗಿ ಮನುಷ್ಯರು

ಸತ್ವ

ಪದಗಳು
ಅನಾಥ
ಪದಕೋಶದಲ್ಲಿ
ಪದಗಳು
ಕಥೆ, ಕಾವ್ಯ, ಕಾದಂಬರಿ
ಹಾಸ್ಯ, ಆದ್ಯಾತ್ಮ ಇತ್ಯಾದಿ
ಸಿಕ್ಕರೆ
ಸಮರ್ಥರ ಕೈಯಲ್ಲಿ